ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 52
೨೬ ಅಕ್ಟೋಬರ್ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

★

ತಾನುಗುಳಿದ್ದನ್ನೇ ಮೈಸೂರು ಕಾಂಗ್ರೆಸ್ ನುಂಗುತ್ತಿದೆ

ಭೂಶಾಸನಕ್ಕೆ ತಿಲಾಂಜಲಿ, ಸ್ವಂತಸಾಗುವಳಿಯ ಹೆಸರಿನಲ್ಲಿ ಮೋಸ

ಮೈಸೂರು ಕಾಂಗ್ರೆಸ್ಸಿನಿಂದ ಪ್ರಗತಿಶೀಲ ಭೂಸುಧಾರಣೆ ಅಸಾಧ್ಯ

ರಾಜ್ಯದಲ್ಲಿ ಭೂಸುಧಾರಣಾಕಾಯಿದೆ ತರುವ ವಿಷಯದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್‌ಸಮಿತಿಯು ಎರಡು ದಿನಗಳು ಚರ್ಚೆ ನಡೆಸಿದೆ. ಚರ್ಚೆಯಲ್ಲಿ ವ್ಯಕ್ತಗೊಂಡಿರುವ ಅಭಿಪ್ರಾಯಗಳನ್ನು ಹೊತ್ತು ಮುಖ್ಯಮಂತ್ರಿಗಳು, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮತ್ತು ಕಂದಾಯ ಸಚಿವರೂ ಎ. ಐ. ಸಿ. ಸಿ. ಮತ್ತು ಪ್ಲಾನಿಂಗ್ ಕಮೀಶನ್ನಿನೊಂದಿಗೆ ಚರ್ಚೆ ನಡೆಸಿ, ನಂತರ ಮಸೂದೆ ತರುವ ಯತ್ನ ನಡೆಸಲಿದ್ದಾರೆ. ಪ್ರದೇಶ ಕಾಂಗ್ರೆಸ್ ಚರ್ಚೆಯ ನಂತರದಲ್ಲಿ ಹೊರಬಿದ್ದಿರುವ ಅಂಶದಲ್ಲಿ ಭೂಸಧಾರಣೆ ತರುವುದರಲ್ಲಿ ಬಹು ಮುಖ್ಯವಾದ ಭೂಹಿಡುವಳಿ ಮಿತಿಯ ಪ್ರಶ್ನೆಯನ್ನು ಕೈಬಿಡಲಾಗಿದೆಯೆಂದು ತಿಳಿದುಬಂದಿದೆ. ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮಂಡಿಸಿರುವ ಅಭಿಪ್ರಾಯಗಳನ್ನು ನೋಡಿದಲ್ಲಿ ಮೈಸೂರು ಕಾಂಗ್ರೆಸ್ ಎತ್ತ ಸಾಗುತ್ತಿದೆ ಎಂದು ಗೋಚರವಾಗುತ್ತದೆ. ಶಿಫಾರಸುಗಳೆಲ್ಲವೂ ಭೂಸುಧಾರಣೆಯ ತತ್ವಕ್ಕೇ ತಿಲಾಂಜಲಿಯನ್ನಿತ್ತು, ಭೂಮಾಲಿಕರನ್ನು ರಕ್ಷಿಸುವಂಥ ತೀವ್ರ ಪ್ರತಿಗಾಮಿ ಕ್ರಮಗಳಾಗಿವೆ.

ಹಿಂದುಳಿದಿದೆ

ಇತರ ಎಲ್ಲ ರಾಜ್ಯಗಳಿಗೂ ಹೋಲಿಸಿ ನೋಡಿದಲ್ಲಿ ಮೈಸೂರು ರಾಜ್ಯ ಭೂಸುಧಾರಣೆಯ ಸಂಬಂಧದಲ್ಲಿ ತೀರಾ ಹಿಂದುಳಿದಿದೆಯಷ್ಟೇ ಅಲ್ಲದೆ ತೀವ್ರಪ್ರತಿಗಾಮೀ ಧೋರಣೆಯನ್ನನುಸರಿಸುತ್ತಿದೆ. ಅಖಿಲ ಭಾರತ ಕಾಂಗ್ರೆಸ್ ನಾಯಕತ್ವದ ಮತ್ತು ಯೋಜನಾ ಆಯೋಗದ ನಿರ್ದೇಶಗಳಿಗೆ ತೀರಾ ವಿರೋಧವಾಗಿ ಹೋಗುತ್ತಿದೆ. ಮೈಸೂರು ರಾಜ್ಯದ ಕಾಂಗ್ರೆಸ್‌ನಾಯಕತ್ವವು ಯಾವುದೇ ಬಗೆಯ ಭೂಸುಧಾರಣೆಗೂ ವಿರೋಧವಿದೆ ಎಂದು ಕಳೆದ ವಾರದಲ್ಲಿ ಎಂ. ಪಿ. ಸಿ. ಸಿ. ಯಲ್ಲಿ ನಡೆದ ಚರ್ಚೆಯಿಂದ ಚೆನ್ನಾಗಿ ಗೊತ್ತಾಗುತ್ತದೆ.

ಭೂಸುಧಾರಣೆ ತರುವ ಹೆಸರಿನಲ್ಲಿ ಅದಷ್ಟು ಕಾಲ ನೂಕುತ್ತ ಜನರ ಕಣ್ಣೊರಸಲು ನೋಡಲಾಗುತ್ತಿದೆ. ರಾಜ್ಯದಲ್ಲಿ ಭೂಸುಧಾರಣೆ ಕಾಯಿದೆ ತರಲು ಸೂಕ್ತ ಶಿಫಾರಸುಗಳನ್ನು ಮಾಡಲು ನಿಯಮಿತವಾಗಿದ್ದ ಜತ್ತಿ ಸಮಿತಿಯ ವರದಿಯು ವರ್ಷವಾಗುತ್ತ ಬಂದರೂ ಅದು ಇನ್ನೂ ಚರ್ಚೆಗಿಟ್ಟಿರುವ ವರದಿಯಾಗಿದೆಯೇ ಹೊರತು, ಯಾವ ಕಾರ್ಯಕ್ರಮಕ್ಕೂ ಎಡೆಗೊಟ್ಟಿಲ್ಲ. ಶಾಸನ ಸಭೆಯಲ್ಲಿ ಒಮ್ಮೆ ಕೂಲಂಕುಷವಾಗಿ ಚರ್ಚೆ ನಡೆದಿದ್ದರೂ ಸಹ, ಅದರ ಆಧಾರದ ಮೇಲೆ ಕಾಯಿದೆ ತಯಾರಿಸುವ ಯತ್ನ ನಡೆಯಲಿಲ್ಲ. ಈಗ ಸ್ವತಃ ವರದಿ

ಉಳಿದಿರುವ ದಾರಿ: ರೈತರ ಸಾಮೂಹಿಕ ಹೋರಾಟ

ಕರ್ತರಾದ ಜತ್ತಿಯವರೇ ಮುಖ್ಯ ಮಂತ್ರಿಯಾಗಿ ತಿಂಗಳುಗಳು ಉರುಳುತ್ತಿದ್ದರೂ ಕಾಯಿದೆ ತರುವ ಪ್ರಶ್ನೆ ಮಾತ್ರ ಮುಂದಕ್ಕೆ ಹೋಗುತ್ತಿದೆ. ಮುಂದಿನ ವಾರದಲ್ಲಿ ಕೂಡಲಿರುವ ಶಾಸನ ಸಭೆಯಲ್ಲಂತೂ ಈ ಮಸೂದೆ ಬರುವುದಿಲ್ಲವಾಗಿದೆ. ರಾಜ್ಯ ಸರಕಾರವೂ ಮತ್ತು ಕಾಂಗ್ರೆಸ್ ಸಂಘಟನೆಯೂ ಭೂಮಾಲಿಕರ ಹಿಡಿತದಲ್ಲಿ ಸಿಕ್ಕಿಬಿದ್ದಿದೆ. ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಶಿಫಾರಸುಗಳು ಇದಕ್ಕೆ ಸಾಕ್ಷಿಯಾಗಿವೆ.

ತೂಕಡಿಸುವವನಿಗೆ ಹಾಸಿಗೆ

ಭೂಹಿಡುವಳಿಯ ಪರಿಮಿತಿಯ ತತ್ವವನ್ನು ಒಪ್ಪಿಕೊಳ್ಳಲಾಗಿದೆ. ಆದರೆ ಕಾರ್ಯರೂಪದಲ್ಲಿ ಅದನ್ನೂ ಕೈಬಿಡಲಾಗಿದೆ. ಸ್ವಂತ ಸಾಗುವಳಿಗಾಗಿ ಗೇಣಿದಾರನಿಂದ ಜಮೀನು ವಶಪಡಿಸಿಕೊಳ್ಳುವುದಕ್ಕೆ ಮಿತಿ ಇರಬೇಕು, ಆದರೆ ಪ್ರಸ್ತುತದಲ್ಲಿ ಸ್ವಂತ ಸಾಗುವಳಿಯಲ್ಲಿರುವ ಹಿಡುವಳಿಯು ಮಿತಿಗೊಳಿಸದಕೂಡದು, ಮುಂದಿನ ಹಿಡುವಳಿಯ ಮೇಲೆ ಮಿತಿಯಿರಬೇಕು ಎಂದು ಎಂ. ಪಿ. ಸಿ. ಸಿ. ಕಾರ್ಯಕಾರೀ ಸಮಿತಿ ತಿಳಿಸುತ್ತದೆ. ಈಗಾಗಲೇ ಭೂಮಾಲಿಕರುಗಳು ಭೂಸುಧಾರಣೆಯ ಕಾಯಿದೆ ಬಂದೀತೆಂದು ಮುನ್ನೆಚ್ಚರಿಕೆ ವಹಿಸಿ ತನ್ನ ಜಮೀನುಗಳೆಲ್ಲವನ್ನು ಸ್ವಂತ ಸಾಗುವಳಿಯ ಪರಿಮಿತಿಗೆ ಅಳವಡಿಸಿಕೊಂಡಿದ್ದಾರೆ. ಕಾಯಿದೆಯನ್ನು ನಿರರ್ಥಕಗೊಳಿಸಲು ಎಷ್ಟು ಬೇಕೋ ಅಷ್ಟು ಸಿದ್ಧತೆ ಮಾಡಿಕೊಂಡಿದ್ದಾರೆ. ಹೀಗಿರುವಾಗ ಕಾಂಗ್ರೆಸ್ಸಿನ ಶಿಫಾರಸು ತೂಕಡಿಸುವವನಿಗೆ ಹಾಸಿಗೆ ಹಾಸಿ ಕೊಟ್ಟಂತೆ ಆಗಿದೆ.

ಗೇಣಿ ಪದ್ಧತಿಯನ್ನು ಕ್ರಮಶಃ ಜತ್ತಿ ಸಮಿತಿಯ ಶಿಫಾರಸು ಮತ್ತು ಕಾಂಗ್ರೆಸ್ಸಿನ ಚುನಾವಣಾ ಘೋಷಣೆಯಲ್ಲಿ ನಿರೂಪಿಸಿರುವಂತೆ ನಿರ್ಮೂಲಗೊಳಿಸಬೇಕು ಎಂದು ತಿಳಿಸಲಾಗಿದೆ. ಗೇಣಿಯ ಅಂಶವನ್ನು ಒಟ್ಟು ಉತ್ಪನ್ನದ ನಾಲ್ಕನೇ ಒಂದು ಭಾಗವಿರಬೇಕೆಂದು ಹೇಳಲಾಗಿದೆ. ಸ್ವಂತ ಸಾಗುವಳಿಗಾಗಿ ಗೇಣಿದಾರರಿಂದ ಜಮೀನು ವಶಪಡಿಸಿಕೊಳ್ಳುವ ವಿಷಯದಲ್ಲಿ ಜತ್ತಿ ಸಮಿತಿಯ ಶಿಫಾರಸನ್ನು ಅಂಗೀಕರಿಸಲಾಗಿದೆ. ತೋಟಗಳನ್ನು ಹಿಡುವಳಿ ಮಿತಿಯಿಂದ ವಿಮುಕ್ತಗೊಳಿಸಲಾಗಿದೆ. ಇದೇ ರೀತಿಯಲ್ಲಿ ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಗೇಣಿದಾರನಿಗೆ ಜಮೀನಿನ ಹಕ್ಕನ್ನು ಕೊಡುವ ಬಗ್ಗೆ, ಭೂಮಾಲಿಕರಿಗೆ ಪರಿಹಾರ ಕೊಡುವ ಬಗ್ಗೆ ಮತ್ತಿನ್ನಿತರ ವಿಷಯಗಳ ಬಗ್ಗೆ ತೀವ್ರವಾ-

(ಕೊನೇ ಪುಟ ನೋಡಿ)

ಕೇರಳ ಜನತೆ ಮತ್ತೊಮ್ಮೆ ಹೇಳುತ್ತಿದೆ:

“ಕಾಂಗ್ರೆಸ್ಸಿಗರೇ ನೀವು ಬೇಡ!”

ಕೇರಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ. ಎ. ದಾಮೋದರ್ ಮೆನೋನ್‌ರು ಕಾಂಗ್ರೆಸು ಕೇರಳದಲ್ಲಿ ಮತ್ತೆ ಬಲ ಸಂಪಾದಿಸುತ್ತಿದೆಯೆಂದು ತುತ್ತೂರಿ ಊದುತ್ತಲೇ ಇದ್ದಾರೆ. ಕೇರಳದ ಗ್ರಾಮ ಪಂಚಾಯಿತಿಗಳಲ್ಲಿಯ ಉಪ ಚುನಾವಣೆಗಳಲ್ಲೂ ಕಾಂಗ್ರೆಸ್ ಬಹುಮತದಿಂದ ಬರುತ್ತಿರುವುದಾಗಿ ಹೇಳಿದ್ದೆ ಹೇಳಿದ್ದು. ಕಾಂಗ್ರೆಸ್ಸಿನವರದು ಎಲ್ಲಾ ಉಲ್ಟಾ ಎನ್ನುವದಕ್ಕೆ ಮತ್ತೆ ಇದೊಂದು ನಿದರ್ಶನ.

ಕಾಂಗ್ರೆಸ್ ಪರ ಪತ್ರಿಕೆಗಳೆಲ್ಲ “ಚುನಾವಣೆಗಳಲ್ಲಿ ಕುಸಿತ, ಕಮ್ಯೂನಿಸ್ಟರ ಕಂಪನ” ಎಂದು ಮುಂತಾಗಿ ಬರೆಯಲಾರಂಭಿಸಿವೆ.

ಆದರೆ ಸತ್ಯದ ಪ್ರತಿಪಾದಕವಾದ ಕಾಂಗ್ರೆಸ್ಸಿನ ಪತ್ರಿಕೆಗಳು ಸತ್ಯವನ್ನೆಂದು ಹೇಳಿವೆ?

ಇಗೋ ಇದೀಗ ಅಂಕಿ-ಸಂಖ್ಯೆಗಳು ದೊರೆತಿವೆ:

ಅಕ್ಟೋಬರ್ ೧ನೆಯ ತಾರೀಕಿನ ವರೆಗೆ 99 ಉಪ ಚುನಾವಣೆಗಳು ನಡೆದುವು ಇದರಲ್ಲಿ 14 ಜನ ಸ್ವತಂತ್ರರು. ಈ ಸ್ವತಂತ್ರರಲ್ಲಿ 9 ಜನರು ಕಮ್ಯೂನಿಸ್ಟರ ಬೆಂಬಲದಿಂದ ವಿಜಯಿಗಳಾದವರು. ಇನ್ನುಳಿದೆಡೆ ಕಮ್ಯೂನಿಸ್ಟರಿಗೆ 44, ಕಾಂಗ್ರೆಸ್‌ವರಿಗೆ 38, ಆರ್. ಎಸ್. ಪಿ. ಯವರಿಗೆ 2, ಪಿ. ಎಸ್. ಪಿ.ಯರಿಗೆ 1 ಸ್ಥಳಗಳು ಬಂದಿವೆ! ಒಟ್ಟು 99 ಸ್ಥಳಗಳಲ್ಲಿ ಕಮ್ಯೂನಿಸ್ಟರು ಮತ್ತು ಅವರ ಬೆಂಬಲಿತ ಸ್ವತಂತ್ರರು 53 ಸ್ಥಳಗಳನ್ನು ಸಂಪಾದಿಸಿದ್ದರೆ ಕಾಂಗ್ರೆಸ್ಸಿನವರು ಬರೀ 38 ಸ್ಥಳಗಳನ್ನು ಪಡೆದಿದ್ದಾರೆ.

ಶ್ರೀ ದಾಮೋದರ ಮೆನೋನ್‌ರ ಮಾತಿನ ಅರ್ಥ ಈಗ ನಿಮಗಾಗಲು ಸಾಕು. ಏನೆಂದರೆ:— **ಉಪಚುನಾವಣೆಗಳಲ್ಲಿ ಹೆಚ್ಚು ಸ್ಥಳಗಳನ್ನು ಕಳೆದುಕೊಂಡಷ್ಟೂ ಜನಪ್ರಿಯತೆಯನ್ನು ಕಾಂಗ್ರೆಸ್ಸು ಸಂಪಾದಿಸುತ್ತಿದೆ!**

ಈ ಸಂಚಿಕೆಯಲ್ಲಿ....

ಸಂಪಾದಕೀಯ

ಏಳನೆಯ ವರ್ಷದ ಮುನ್ನಡೆಯಲ್ಲಿ 'ಜನಶಕ್ತಿ'

ಈ ಸಂಚಿಕೆಯೊಂದಿಗೆ 'ಜನಶಕ್ತಿ'ಯ ಬಾಳುವೆಯಲ್ಲಿ ಮತ್ತೊಂದು ವರ್ಷ ಪೂರ್ಣವಾಗುತ್ತದೆ. 1947—49ರ ಅವಧಿಯಲ್ಲಿ ಎರಡು ವರ್ಷ ಕಾಲ ಹುಬ್ಬಳ್ಳಿಯಿಂದ ಹೊರಡುತ್ತಿದ್ದ ಈ ಪತ್ರಿಕೆ, ತನ್ನ ನಿರ್ಭೀತ ವಿಚಾರ ಪ್ರತಿಪಾದನೆಯಿಂದ, ನಿರ್ದಾಕ್ಷಿಣ್ಯವಾದ ಟೀಕೆ-ಟಿಪ್ಪಣಿಗಳಿಂದ, ಸಮರ್ಥ ಮಾರ್ಗದರ್ಶನದಿಂದ ಎಲ್ಲ ಸ್ವಾತಂತ್ರ್ಯಪ್ರಿಯ ಜನವಿಭಾಗಗಳ ಪ್ರೀತ್ಯಾದರಗಳಿಗೆ ಪಾತ್ರವಾಯಿತು.

ಆಳುವ ವರ್ಗ 'ಜನಶಕ್ತಿ' ಪತ್ರಿಕೆಯ ಮೇಲೆ ವಕ್ರದೃಷ್ಟಿ ಇಟ್ಟು ಕಾಡಿಸುತ್ತಲೇ ಇತ್ತು. ಸರಕಾರದ ದಬ್ಬಾಳಿಕೆಯ ಅಸ್ತ್ರದ ಪ್ರಯೋಗದಿಂದಾಗಿ, ಪತ್ರಿಕೆಯನ್ನೆ ಹೊರಡಿಸಬಾರದೆಂಬ ನಿಷೇಧಾಜ್ಞೆಯಿಂದಾಗಿ ಪತ್ರಿಕೆಯ ಪ್ರಕಟಣೆ ಅನಿವಾರ್ಯವಾಗಿ ಕೆಲಕಾಲ ನಿಲ್ಲಬೇಕಾಯಿತು.

ಹಾಗೆ ಹುಬ್ಬಳ್ಳಿಯಲ್ಲಿ ಪ್ರಕಟಣೆ ನಿಲ್ಲಿಸಲಾದ 'ಜನಶಕ್ತಿ'ಯನ್ನು 1952ರ ಆರಂಭದಲ್ಲಿ ಬೆಂಗಳೂರಿಗೆ ತಂದು ಪ್ರಕಟಣೆ ಆರಂಭಿಸಲಾಯಿತು. ಹಣದ ಮುಗ್ಗಟ್ಟಿನಿಂದಾಗಿ, ಮುದ್ರಣದ ವ್ಯವಸ್ಥೆ ಸರಿಯಿಲ್ಲದುದರಿಂದಾಗಿ 1953ರ ಅಂತ್ಯದಲ್ಲಿ ಪತ್ರಿಕೆಯನ್ನು ಮತ್ತೆ ನಿಲ್ಲಿಸಬೇಕಾಗಿ ಬಂತು.

ಇಷ್ಟೆಲ್ಲ ಅಡ್ಡಿ ಆತಂಕಗಳೂ ಹಣದ ಮುಗ್ಗಟ್ಟು ಇದ್ದರೂ ಸಹ 'ಜನಶಕ್ತಿ' ಕನ್ನಡ ಓದುಗರ ಅಪಾರ ಮನ್ನಣೆ ಗಳಿಸಿತು. ರೈತ ಕಾರ್ಮಿಕರ, ಮಧ್ಯಮ ವರ್ಗದವರ ಮತ್ತಿತರ ದಲಿತ ವರ್ಗದವರ ಆಶೋತ್ತರಗಳನ್ನೂ, ಹೋರಾಟಗಳನ್ನೂ ಪ್ರತಿಬಿಂಬಿಸುವ ಏಕೈಕ ಪತ್ರಿಕೆಯೆಂದು ಖ್ಯಾತಿ ಗಳಿಸಿತು.

'ಜನಶಕ್ತಿ' ಯ ಈ ಜನಪ್ರಿಯತೆಯೇ ಮತ್ತೆ ಪ್ರಕಟಣೆಯನ್ನಾರಂಭಿಸಲು ನಮಗೆ ಉತ್ಸಾಹ ನೀಡಿತು. ಹರಿದು ಹಂಚಿದ್ದ ಕನ್ನಡನಾಡು ಒಂದಾದಾಗ ನಾಡಿನ ಜನಸಮುದಾಯದ ಪ್ರಜಾಪ್ರಭುತ್ವ ಚಳವಳಿಯನ್ನು ಕ್ರೋಢೀಕರಿಸಲು, ಅವರ ಹೋರಾಟಗಳನ್ನು ಪ್ರತಿಬಿಂಬಿಸಲು ಪತ್ರಿಕೆಯ ಅಗತ್ಯತೆಯು ಹೆಚ್ಚಿತು. 'ಜನಶಕ್ತಿ'ಯ ಅನೇಕ ಹಿತೈಷಿಗಳ ಪ್ರೋತ್ಸಾಹದಿಂದ ಕನ್ನಡನಾಡಿನ ಉದಯ ನವಂಬರ್ ೧, ೧೯೫೬ರಂದು ಪ್ರಕಟಣೆ ಆರಂಭಿಸಿದೆವು. ಅಂದಿನಿಂದ ಈವರೆಗೆ 'ಜನಶಕ್ತಿ' ಪತ್ರಿಕೆ ತಪ್ಪದೆ ಪ್ರಕಟವಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಓದುಗರು ಮತ್ತು ಹಿತೈಷಿಗಳಿಂದ ನಮಗೆ ದೊರೆತಿರುವ ಸಹಕಾರ ಮತ್ತು ಪ್ರೋತ್ಸಾಹ ನವಚೇತನವನ್ನಿತ್ತಿದೆ. ನ್ಯೂಸ್‌ಪ್ರಿಂಟಿನ ಅಭಾವ ಮತ್ತು ಇನ್ನಿತರ ತೊಂದರೆಗಳು ಬೇಕಾದಷ್ಟಿದ್ದರೂ ಸಹ ಪತ್ರಿಕೆಯ ಪ್ರಕಟಣೆ ಎಡಬಿಡದೆ ಸಾಗುತ್ತಿದೆ.

ಜಾಹೀರಾತು ಸಾಮಾನ್ಯವಾಗಿ ಇಲ್ಲದೆಯೇ ಪ್ರಕಟವಾಗುತ್ತಿರುವ ಪತ್ರಿಕೆ ಎಂದರೆ 'ಜನಶಕ್ತಿ'. ಜಾಹೀರಾತುದಾರರ ಬೆಂಬಲವಿಲ್ಲದಿರುವುದರಿಂದ 'ಜನಶಕ್ತಿ' ಹೆಚ್ಚು ಪುಟಗಳನ್ನು ಓದುಗರಿಗೆ ನೀಡಲು ಸಾಧ್ಯವಾಗದಿದೆ. ನಮಗಿರುವ ಒಂದೇ ಬೆಂಬಲವೆಂದರೆ ಓದುಗರ ವಿಶ್ವಾಸ. ಇದು ಸದಾಕಾಲವೂ ಇರಲೆಂಬುದೇ ನಮ್ಮ ಹಾರೈಕೆ.

'ಜನಶಕ್ತಿ' ಈ ವರೆಗೆ ಹತ್ತು ಪುಟಗಳನ್ನು ಹೊತ್ತು ಪ್ರಕಟಗೊಳ್ಳುತ್ತಿದೆ. ಸ್ಥಳಸಂಕೋಚದಿಂದಾಗಿ ಕೆಲವು ಬಾರಿ ವಿಷಯಗಳನ್ನು ಕೈಬಿಡಬೇಕಾದ ಪರಿಸ್ಥಿತಿ ಬಂದಿದೆ. ಓದುಗರಿಗೆ ಆದಷ್ಟು ಹೆಚ್ಚು ವಿಷಯಗಳನ್ನು ನೀಡುವ ಹಿರಿಯ ಉದ್ದಿಶ್ಯವಿದ್ದರೂ ಅದು ಸಾಧ್ಯವಾಗದಿತ್ತು. ಈ ಅಭಾವವನ್ನು ನೀಗಿಸುವ ದೃಷ್ಟಿಯಿಂದ 'ಜನಶಕ್ತಿ'ಯ ಪುಟಗಳನ್ನು ಹೆಚ್ಚಿಸಲು ತೀರ್ಮಾನಿಸಿದ್ದೇವೆ. ಮುಂದಿನ ಸಂಚಿಕೆಯಿಂದ ಪ್ರತಿ ವಾರ 'ಜನಶಕ್ತಿ' ಹನ್ನೆರಡು ಪುಟಗಳನ್ನು ಹೊತ್ತು ಪ್ರಕಟಗೊಳ್ಳುವುದು. ಪುಟ ಹೆಚ್ಚಿಸಿದಂತೆ ಬೆಲೆಯನ್ನೂ ಸ್ವಲ್ಪ ಹೆಚ್ಚಿಸುವುದು ಅನಿವಾರ್ಯವಾಗಿದೆ. ಈ ಬದಲಾವಣೆಯನ್ನು ಓದುಗರು ಸ್ವಾಗತಿಸುವರೆಂದು ನಾವು ಭರವಸೆ ಹೊಂದಿದ್ದೇವೆ.

ಈವರೆಗೆ ಬೆಂಬಲ, ಪ್ರೋತ್ಸಾಹ ನೀಡಿದ ನಮ್ಮ ಓದುಗರು ಮತ್ತು ಹಿತೈಷಿಗಳೆಲ್ಲರಿಗೂ ನಾವು ಕೃತಜ್ಞರಾಗಿದ್ದೇವೆ. ಮುಂದೆಯೂ ಇದೇ ರೀತಿಯಲ್ಲಿ ಪ್ರೋತ್ಸಾಹ ನೀಡಬೇಕೆಂದು ಕೇಳಿಕೊಳ್ಳುತ್ತೇವೆ.

ನಿಮ್ಮ ಊರಲ್ಲಿ 'ಜನಶಕ್ತಿ'ಗೆ ಹೆಚ್ಚು ಸಂಖ್ಯೆಯಲ್ಲಿ ಚಂದಾದಾರನ್ನೊದಗಿಸಿ! ಮಾರಾಟ ಹೆಚ್ಚಿಸಿ! 'ಜನಶಕ್ತಿ'ಯ ಸಂದೇಶ ಎಲ್ಲೆಡೆಗೂ ತಲುಪುವಂತೆ ಮಾಡಿರಿ! ಇದೇ ನಮ್ಮ ಕೇಳಿಕೆಯಾಗಿದೆ.

ಭಾರತಕ್ಕೆ ಅಧ್ಯಕ್ಷ ನಾಸ್ಸೇರ್ ಭೇಟಿ

ಸಂಯುಕ್ತ ಅರಬ್‌ಗಣರಾಜ್ಯದ ಅಧ್ಯಕ್ಷರಾದ ಕರ್ನಲ್ ನಾಸ್ಸೇರ್‌ಅವರು ಇದೇ ಚಳಿಗಾಲದಲ್ಲಿ ಭಾರತಕ್ಕೆ ಭೇಟಿಕೊಡುವ ಸಂಭವವಿದೆಯೆಂದು ಹಲವು ಖಚಿತ ಮೂಲಗಳಿಂದ ತಿಳಿದುಬರುತ್ತದೆ.

ಅಧ್ಯಕ್ಷ ನಾಸ್ಸೇರರು ಇಲ್ಲಿ ಪ್ರಧಾನಿ ನೆಹ್ರೂರವರೊಂದಿಗೆ ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಹಾಗೂ ಅರಬ್‌ರಾಷ್ಟ್ರಗಳ ಅಭಿವೃದ್ಧಿ ಇವುಗಳ ಬಗ್ಗೆ ವಿಚಾರವಿನಿಮಯ ನಡೆಸುವರು. ಸೂಯೇಜ್ ಘರ್ಷಣೆಯ ಕಾಲಕ್ಕೆ ಈಗ ಎರಡು ವರುಷಗಳ ಹಿಂದೆ ಇವರಿಬ್ಬರ ಭೇಟಿಯಾಗಿತ್ತು.

ಏಷ್ಯಾ—ಆಫ್ರಿಕಾಗಳಲ್ಲಿ ವಿಶೇಷವಾಗಿ ಇತ್ತೀಚೆಗಿನ ಪಾಕಿಸ್ತಾನದ ಬೆಳವಣಿಗೆಗಳು ಇವರಿಬ್ಬರ ಮಾತುಕತೆಯ ಮುಖ್ಯವಿಷಯಗಳಾಗಬಹುದೆಂದು ಊಹಿಸಲಾಗುತ್ತಿದೆ. ಅಧ್ಯಕ್ಷ ನಾಸ್ಸೇರರು ಸಾಮ್ರಾಜ್ಯಶಾಹಿಗಳು ಸೃಷ್ಟಿಸುತ್ತಿದ್ದ ಸಮಸ್ಯೆಗಳ ಮೇಲೆ ಸಮಸ್ಯೆಗಳನ್ನು ಯಶಸ್ವಿಯಾಗಿ ಎದುರಿಸುತ್ತ ಬಂದಿರುವುದನ್ನು ಕಂಡು ಭಾರತೀಯ ಜನತೆ ಅವರ ಬಗ್ಗೆ ವಿಶೇಷಗೌರವ ಇಟ್ಟುಕೊಂಡಿದೆಯಲ್ಲದೆ ಉತ್ಸಾಹದ, ಸಂಭ್ರಮದ ಸ್ವಾಗತ ನೀಡುವುದು ಖಚಿತವೆಂದು ಹೇಳಬಹುದು.

"ಪ್ರತಿಗಾಮಿ ಶಕ್ತಿಗಳ ಬಗ್ಗೆ 'ಹುಷಾರ್ !"

ಪಾಕಿಸ್ತಾನಕ್ಕೊದಗಿದ ಇಂದಿನ ದುರ್ದೈವ ಭಾರತಕ್ಕೊಂದು ತೀವ್ರ ಎಚ್ಚರಿಕೆಯಾಗಿದೆ. ಕಾರ್ಮಿಕವರ್ಗಕ್ಕೂ, ಮಧ್ಯಮವರ್ಗಕ್ಕೂ, ರೈತವರ್ಗಕ್ಕೂ ಇದೊಂದು ಭಾರೀ ಎಚ್ಚರಿಕೆ" ಎಂಬುದಾಗಿ ಭಾರತ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಕಾರ್ಯಕಾರೀ ಸಮಿತಿಯ ಕಾರ್ಯದರ್ಶಿಗಳಾದ ಕಾಂ. ಬಿ. ಟಿ ರಣದಿವೆಅವರು ಕೊಯಮತ್ತೂರಿನಲ್ಲಿ ಮಾತನಾಡುತ್ತಾ ತಿಳುಹಿಸಿದ್ದಾರೆ.

"ನಮ್ಮ ದೇಶದಲ್ಲೂಕೂಡ ನಮ್ಮ ಸ್ವತಂತ್ರವಿದೇಶಾಂಗನೀತಿಯನ್ನು ಬದಲಿಸಿ, ದೇಶವನ್ನು ಇಬ್ಭಾಗಗೊಳಿಸಿ ಆಂಗ್ಲೋ—ಅಮೇರಿಕನ್ ಗುಂಪಿಗೆ ತಳ್ಳಿ ಅಮೇರಿಕನ್ ಸಹಾಯವನ್ನು ಹೆಚ್ಚುಹೆಚ್ಚು ಅವಲಂಬಿಸುವಂತೆ ಮಾಡುವ ಪ್ರತಿಗಾಮೀ ಶಕ್ತಿಗಳೂ, ಜನರೂ ಇರುವರು. ಅಮೇರಿಕೆಯ ಸಹಾಯದ ಆಶ್ವಾಸನೆ ಕೊಕ್ಕೆಗಳಿಂದ ಕೂಡಿದೆ. ದೇಶದ ಸ್ವಾತಂತ್ರ್ಯವನ್ನು ಹಾಗೂ ಐಕ್ಯತೆಯನ್ನು ರಕ್ಷಿಸಲು ಮಧ್ಯಮವರ್ಗದವರೂ, ರೈತರೂ ಕಾರ್ಮಿಕರೂ ಒಂದಾಗಿ ಪ್ರತಿಗಾಮಿಗಳನ್ನು ಎದುರಿಸುವುದು ಕರ್ತವ್ಯವಾಗಿದೆ" ಎಂದೂ ಹೇಳಿದರು.

"ಕೇರಳದಲ್ಲಿ ಅಭದ್ರ ಪರಿಸ್ಥಿತಿಯೆಂಬುದು ಕಾಂಗ್ರೆಸಿಗರು ಕೇರಳಮಂತ್ರಿಮಂಡಳವನ್ನು ಉರುಳಿಸಲು ಹೂಡಿದ ಪಿತೂರಿ. ಕೇರಳದಲ್ಲಿ ಎಲ್ಲಿ ಅಭದ್ರಸ್ಥಿತಿಇದೆ? ಯಾರಿಗೆ? ಬಂಡವಾಳಗಾರರೂ, ಭೂಯಜಮಾನರಿಗೂ ಅಭದ್ರಪರಿಸ್ಥಿತಿಯೆಂದು ಭಾವಿಸುತ್ತಿದ್ದಾರೆ. ಯಾಕೆಂದರೆ ಇಂದಿನ ಜನಪ್ರಿಯ ಸರ್ಕಾರ ಕಾರ್ಮಿಕರ ಹಾಗೂ ರೈತರಮೇಲೆ ಅವರು ನಡೆಸುತ್ತಿದ್ದ ಶೋಷಣೆಯನ್ನು ತಡೆಗಟ್ಟುತ್ತಿದೆ. ಕಾಂಗ್ರೆಸ್ಸಿಗರ ರಾಜ್ಯಾಂಗಕ್ಕನುಗುಣವಾಗಿಯೇ ಕೇರಳದಲ್ಲಿ ಬಂದಿರುವ ಕಮ್ಯುನಿಸ್ಟ್ ಸರ್ಕಾರ 5 ವರುಷಗಳಕಾಲ ಯಶಸ್ವಿಯಾಗುಳಿದರೆ ಬೇರೆ ರಾಜ್ಯಗಳಲ್ಲೂ ಕಾಂಗ್ರೆಸ್ಸಿಗರಿಗೆ ಅವಕಾಶ ತಪ್ಪಿಹೋಗುತ್ತದೆ ಎಂಬುದೇ ಅವರಿಗಿರುವ ಭೀತಿ" ಎಂದೂ ಅವರು ಕೇರಳದ ಬಗ್ಗೆ ಮಾತನಾಡುತ್ತ ಹೇಳಿದರು.

ಸ್ವಲ್ಪದರಲ್ಲಿ ಸುದ್ದಿ

ಥಾಯ್ಲೆಂಡಿನಲ್ಲೂ ದಂಡಿನಾಳಿಕೆ

ಏಷ್ಯನ್‌ರಾಷ್ಟ್ರಗಳು ಒಂದರಹಿಂದೊಂದು ದಂಡಿನಾಳ್ವಿಕೆಗೊಳಪಡುತ್ತಿರುವುದು ಈ ಪೂರ್ವಭಾಗದ ಪ್ರಜಾಪ್ರಭುತ್ವವಾದಿಗಳಿಗೆಲ್ಲ ಅತ್ಯಂತ ಸಂಕಟದ ವಿಚಾರವಾಗಿದೆ. ಬರ್ಮ, ಆಮೇಲೆ ಪಾಕಿಸ್ತಾನ ಇದಾದಮೇಲೆ ಈಗ ಥೈಯ್ಲೆಂಡ್ ದಂಡಿನಾಳ್ವಿಕೆಗೆ ಒಳಪಟ್ಟಿತು.

ಥೈಯ್ಲೆಂಡಿನ ಬಲಿಷ್ಠಮನುಷ್ಯನೆನಿಸಿದ ರಾಷ್ಟ್ರದ ದಂಡಿನ ವರಿಷ್ಠಾಧಿಕಾರಿಯಾದ ಮಾರ್ಷಲ್ ಸರಿತ್ ಥಾನರಾತ್ ಎಲ್ಲಾ ರಾಜಕೀಯ ಪಕ್ಷಗಳನ್ನು ರದ್ದುಪಡಿಸಿ 26 ವರುಷಗಳ ಚರಿತ್ರೆಯಿದ್ದ ರಾಜ್ಯಾಂಗವನ್ನೆ ವಿಸರ್ಜಿಸಿಬಿಟ್ಟಿದ್ದಾನೆ.

"ಕಮ್ಯುನಿಸ್ಟ್ ವಿರೋಧಿ ರಕ್ತರಹಿತ ಕ್ರಾಂತಿ" ಎಂದು ಕೊಚ್ಚಿಕೊಳ್ಳುವ ಮಾರ್ಷಲ್ ಸರಿತ್ ಇದೀಗ ನರಬೇಟೆಗೆ ಹೊರಟಿದ್ದಾನೆ. "ಕಮ್ಯುನಿಸ್ಟ್ ವಿರೋಧ ಕಾನೂನು" ಎಂಬ ಸ್ವೇಚ್ಛಾ ಕಾನೂನನ್ನು ಜಾರಿಗೆ ತಂದು ಕಂಡವರನ್ನೆಲ್ಲ ಬಂಧಿಸಲಾಗುತ್ತಿದೆ. 11ಪತ್ರಿಕಾ ಕಛೇರಿಗಳಿಗೆಲ್ಲ ಬಲವಾದ ಬೀಗ ಜಡಿಯಲಾಗಿದೆ. 'ಕಮ್ಯುನಿಸ್ಟ್ ವಿರೋಧಿ ಕಾನೂನ'ನ್ನು ಮುರಿದರೆಂಬ ಆಪಾದನೆಯಮೇಲೆ ರಾಷ್ಟ್ರದ 30-40 ಜನ ಪ್ರಮುಖರನ್ನು ದಸ್ತಗಿರಿ ಮಾಡಲಾಗಿದೆ. ಇವರಲ್ಲಿ ಏಷ್ಯಾ-ಆಫ್ರಿಕಾ ಐಕ್ಯತಾಸಮಿತಿಯ ಸದಸ್ಯಪ್ರಮುಖರೊಬ್ಬರೂ ಇರುವರು.

ಇದೇ ಸಂದರ್ಭದಲ್ಲಿ ಅಮೇರಿಕೆಯ ರಕ್ಷಣಾ ಇಲಾಖೆಯ ಕಾರ್ಯದರ್ಶಿ ನೀಲ್ ಮೆಕೆಲ್‌ರಾಯ್ ಬ್ಯಾಂಕಾಕ್ (ಥೈಯ್ಲೆಂಡ ರಾಜಧಾನಿ)ಗೆ ಆಗಮಿಸಿದುದು ಗಮನಾರ್ಹವಾಗಿದೆ. ಅಲ್ಲಿ "ಬಲಪ್ರಯೋಗ, ಒತ್ತಡಕ್ಕೆ ಬೆದರಿ ಸ್ವತಂತ್ರ ವಿಶ್ವ ಕಾಲ್ತೆಗೆಯುವದಿಲ್ಲವೆಂಬುದನ್ನು ಕಮ್ಯೂನಿಸ್ಟರಿಗೆ ಸ್ಪಷ್ಟಪಡಿಸಬೇಕಾಗಿದೆ" ಎಂದು ಮಾತನಾಡಿರುವುದು ಅಮೇರಿಕೆಯ ಮನೋಭಾವವನ್ನು ಸ್ಪಷ್ಟಪಡಿಸಿದೆಯಲ್ಲದೆ ಈ ದಡಿನಾಳಿಕೆಗೆ ಬೆಂಬಲವೂ ಇದೆ ಎಂಬುದನ್ನು ಸೂಚಿಸಲು ಸಾಕಾಗಿದೆ.

● ಮಧ್ಯಪೂರ್ವದಿಂದ ದೂರಪೂರ್ವಕ್ಕೆ ಅಮೇರಿಕನ್ ಕುತಂತ್ರಗಳ ಫಲವಾಗಿ ವಿಪರೀತಸ್ಥಿತಿಗಳು ಸ್ಥಳಾಂತರವಾಗುತ್ತಿವೆ. ಏಷ್ಯಾದ ಸ್ವಾತಂತ್ರ್ಯಪ್ರಿಯರು, ಪ್ರಜಾಪ್ರಭುತ್ವವಾದಿಗಳು ಸಾಮೂಹಿಕವಾಗಿ ಮೇಲೆದ್ದೇಳುವ ಕಾಲ ಹತ್ತಿರವಾಗುತ್ತಿದೆ. ಈ ಭಾಗದ ಸ್ಥಿತಿ ಹತೋಟಿಮೀರುತ್ತಿರುವದರಲ್ಲಿ ಇದೀಗ ಸಂದೇಹವೇ ಉಳಿದಿಲ್ಲ.

"ಪರಿಶುದ್ಧ ಬಾಂಬ್" ಎಂಬುದು ಶುದ್ಧ ತಕ್ಕು

"ಯುದ್ಧವೇನಾದರೂ ನಡೆವರೆ 'ಪರಿ

(೯ನೇ ಪುಟ ನೋಡಿ)

ಕೇರಳದಲ್ಲಿ ಪೋಲಿಸರ ಗೋಳಿಬಾರಿನಿಂದ ಇಬ್ಬರು ಕಾರ್ಮಿಕರ ಮರಣ, ನಾಲ್ವರಿಗೆ ಗಾಯ

ಸರಕಾರದೊಂದಿಗೆ ಸಹಕರಿಸದಂತೆ ಪೋಲಿಸರಿಗೆ ಪ್ರೋತ್ಸಾಹನೆ ?

ಕೇರಳದಲ್ಲಿ ಬ್ರಿಟಿಷ್ ಮಾಲಿಕತ್ವದಲ್ಲಿರುವ ತೋಟದಲ್ಲಿ ನಡೆದಿರುವ ಕಾರ್ಮಿಕರ ಮುಷ್ಕರದಕಾಲಕ್ಕೆ ಪೋಲೀಸರು ಅಕ್ಟೋಬರ್ 20 ರಂದು ಮಾಡಿದ ಗೋಳೀಬಾರ್‌ನಿಂದಾಗಿ ಕಾರ್ಮಿಕರಿಬ್ಬರು ಮೃತರಾದ ದುಃಖದಾಯಕ ಘಟನೆ ಕಳೆದ ವಾರ ನಡೆಯಿತು. ಮೃತರಾದವರಿಬ್ಬರೂ ಕಮ್ಯೂನಿಸ್ಟ್ ಕೆಲಸಗಾರರಾಗಿದ್ದು ನಾಲ್ವರಿಗೆ ತೀವ್ರ ಗಾಯಗಳಾಗಿವೆ. ಈ ಘಟನೆ ಗುಡಿರಳ್ಳಿಯಲ್ಲಿ ನಡೆಯಿತು. ಒಟ್ಟು ಮೂರು ಕಡೆಗೆ ಪೋಲೀಸರು ಗೋಳಿಬಾರ್ ನಡೆಸಿದ್ದಾರೆ.

ಕಳೆದ ಅಕ್ಟೋಬರ್ ನಾಲ್ಕನೆಯ ತಾರೀಖಿನಿಂದ ಇಲ್ಲಿ ಅಖಿಲಭಾರತ ಟ್ರೇಡ್ ಯುನಿಯನ್ ಕಾಂಗ್ರೆಸ್ ನಾಯಕತ್ವದಲ್ಲಿ ಕೆಲಸಗಾರರ ಬೇಡಿಕೆಗಳಿಗಾಗಿ ಮುಷ್ಕರ ನಡೆಯುತ್ತಿದೆ 1957 ರ ಬೋನಸ್ಸು, ಗ್ರಾಚ್ಯುಯಿಟಿ, ಪ್ರಾವಿಡೆಂಟ್ ಫಂಡ್, ಮತ್ತು ರಾಷ್ಟ್ರೀಯ ಹಾಗೂ ಹಬ್ಬಗಳ ದಿನದಂದು ರಜೆ ಇವು ಕಾರ್ಮಿಕರ ಬೇಡಿಕೆಗಳಾಗಿವೆ. ತೋಟಗಳ ಮಾಲೀಕರು ಕಾರ್ಮಿಕರ ಬೇಡಿಕೆಗಳಿಗೆ ಕಿವಿಗೊಡದ್ದರಿಂದ ಕಾರ್ಮಿಕರು ಕೊನೆಯದಾಗಿ ಮುಷ್ಕರ ಹೂಡಬೇಕಾಯಿತು. ಇಂಟಕ್ ಹತೋಟಿಯಲ್ಲಿದ್ದ ಕಾರ್ಮಿಕರೂ ಒಂದು ದಿನದ ಮಟ್ಟಿಗೆ ಮಾತ್ರ ಮುಷ್ಕರದಲ್ಲಿ ಭಾಗ ವಹಿಸಿದ್ದರು, ನಂತರ ಮುಷ್ಕರ ಹಿಂತೆಗೆದುಕೊಂಡರು.

ಮುಷ್ಕರ ನ್ಯಾಯಬದ್ಧವಾದುದು

ಈ ಘಟನೆ ನಡೆದಬಳಿಕ ಕೇರಳದ ಕಾರ್ಮಿಕಸಚಿವರಾದ ಶ್ರೀ ಟಿ. ವಿ. ಥಾಮಸ್‌ರವರು ಸ್ಥಳಕ್ಕೆ ಭೇಟಿಯಿತ್ತರು. "ಎ. ಐ. ಟಿ. ಯು. ಸಿ. ನಾಯಕತ್ವದಲ್ಲಿ ನಡೆದ ಈ ಮುಷ್ಕರ ಸಂಪೂರ್ಣ ನ್ಯಾಯಬದ್ಧವಾಗಿವೆಯೆಂದು ನಮಗನಿಸುತ್ತದೆ. ಯಾಕೆಂದರೆ ಇದಕ್ಕೆ ಕಾರ್ಮಿಕರ ಬಹುಮತದ ಬೆಂಬಲವಿದೆ" ಎಂದು ಶ್ರೀ ಥಾಮಸ್‌ರವರು ಹೇಳಿದ್ದಾರೆ.

"ಕಾರ್ಮಿಕರು ಮುಷ್ಕರವನ್ನು ಹಿಂತೆಗೆದುಕೊಳ್ಳಬೇಕೆಂದು ಸರ್ಕಾರ ಕೇಳಿಕೊಳ್ಳುವದಿಲ್ಲ. ಅದಕ್ಕೆ ಬದಲಾಗಿ ಮ್ಯಾನೇಜ್‌ಮೆಂಟ್ ಮೇಲೆ ಸಾಧ್ಯವಿದ್ದ ತಕ್ಕ ಕ್ರಮಗಳನ್ನು ಕೈಕೊಳುತ್ತದೆ. ಯಾಕೆಂದರೆ ಮ್ಯಾನೇಜ್‌ಮೆಂಟಿನವರು ಮೊದಲಿನಿಂದಲೂ ಒಪ್ಪಿತ ತತ್ವಗಳನ್ನೆಲ್ಲ ಗಾಳಿಗೆ ತೂರಿ ಮುಷ್ಕರದ ಸ್ಥಿತಿಗೆ ಕಾರಣವಾಗಿದ್ದಾರೆ." ಎಂದೂ ನುಡಿದ ಸಚಿವರು ಹೀಗೆ ಹೇಳಿದರು :

"ಮುಷ್ಕರದಲ್ಲಿ ತೊಡಗಿರುವ ಕಾರ್ಮಿಕರು ಸ್ಪೆಷಿಯಲ್ ಅಧಿವೇಶನದಲ್ಲಿ ತೀರ್ಮಾನಿಸಲ್ಪಟ್ಟ ಯಾವ ವಿಧಿನಿಯಮಗಳನ್ನೂ ಮುರಿದಿಲ್ಲ. ಎಲ್ಲೋ ಕೆಲವು ಸಣ್ಣಪುಟ್ಟ ಘಟನೆಗಳು ನಡೆದಿದ್ದರೂ ಕಾರ್ಮಿಕರು ಮುಷ್ಕರದ ಕಾಲದಲ್ಲಿ ತೀರಾ ಶಾಂತರಾಗಿಯೇ ಇದ್ದರು. ಈ ಸಂಬಂಧದ ತೀರ್ಪಿಗಾಗಿ ಮ್ಯಾನೇಜ್‌ಮೆಂಟಿನವರೂ ಇಂಟಕ್ ಸಂಘದವರೂ ಮಾಡಿಕೊಂಡಿರುವ ಅರ್ಜಿಯನ್ನು ಸರ್ಕಾರವು ತಿರಸ್ಕರಿಸುತ್ತದೆ. ಯಾಕೆಂದರೆ ಅದು ಕಾನೂನು ಬಾಹಿರವಾಗಿದೆ. ಕೈಗಾರಿಕಾ ವಿವಾದ ಕಾನೂನಿನ 10 (2)ನೆಯ ನಿಬಂಧನೆಗನುಗುಣವಾಗಿ ಬಹುಸಂಖ್ಯಾತ ಕಾರ್ಮಿಕರ ಪ್ರಾತಿನಿಧ್ಯ ಇದರಲ್ಲಿದೆಯೆಂದು ತೃಪ್ತಿಯಾದರೆ ಮಾತ್ರ ಅರ್ಜಿಯನ್ನು ಸ್ವೀಕರಿಸಬಹುದು. ಇಂಟಕ್‌ನವರಿಗೆ ಇಲ್ಲಿ ಬಹುಮತವಿಲ್ಲ. ಮ್ಯಾನೇಜ್‌ಮೆಂಟನವರ ಪ್ರಕಟಣೆಗಳ ಪ್ರಕಾರವೇ ಇಂಟಕ್‌ನವರ ಕಾರ್ಮಿಕರು ಶೇಕಡಾ 25ರಿಂದ 44ರ ವರೆಗೆ ಕೆಲಸದ ಮೇಲೆ ಹಾಜರಾಗುತ್ತಿದ್ದರು, ಅಕ್ಟೋಬರ್ 14ರಂದು ಒಟ್ಟು 30,000 ಕಾರ್ಮಿಕರಲ್ಲಿ ಕೇವಲ 8,600 ಕೆಲಸಗಾರರು ಮಾತ್ರ ಹಾಜರಿದ್ದರು.

ಮೂಲ ಕಾರಣ

ಈ ವಿವಾದದ ಮುಖ್ಯ ಕಾರಣ 1957 ರ ಸಾಲಿನ ಬೋನಸ್ ಆಗಿದೆ. ಮ್ಯಾನೇಜ್‌ಮೆಂಟ್ ಮುಂದೆ ನಾನೊಂದು ವಿಚಾರವನ್ನಿಟ್ಟೆ. ಸದ್ಯ ಪ್ರತಿಯೊಬ್ಬ ಕಾರ್ಮಿಕನಿಗೂ ತಲಾ 20 ರೂಪಾಯಿಗಳನ್ನೀಯಬೇಕು ಮತ್ತು ಮುಂದೆ ಬೋನಸ್ ವಿಚಾರ ಇತ್ಯರ್ಥವಾದ ಬಳಿಕ ಇದನ್ನು ಲೆಕ್ಕದಲ್ಲಿ ಸರಿಹೊಂದಿಸಿಕೊಳ್ಳಬೇಕು. ಕಾರ್ಮಿಕ ಸಂಘವೂ ಇದಕ್ಕೆ ಸಮ್ಮತಿ ನೀಡಿತ್ತು. ಆದರೆ ಮ್ಯಾನೇಜ್‌ಮೆಂಟಿನವರು ಯಾವ ಸ್ಪಷ್ಟೀಕರಣವನ್ನೂ ಕೊಡದೆ ಇದನ್ನು ತಿರಸ್ಕರಿಸಿಬಿಟ್ಟರು.

ಸರ್ಕಾರದೊಂದಿಗೆ ಅಸಹಕಾರ

ಸರ್ಕಾರದ ಆಲೋಚನೆಯನ್ನು ಒಂದಿಷ್ಟೂ ಗಮನಿಸದೆ, ಯಾವ ವಿವರಣೆಯನ್ನೂ ನೀಡದೆ ಸರ್ಕಾರದೊಂದಿಗೆ ಅಸಹಕಾರ ಮನೋಭಾವ ತಾಳಿರುವುದನ್ನು ಮ್ಯಾನೇಜ್‌ಮೆಂಟಿನವರು ವ್ಯಕ್ತಪಡಿಸಿದ್ದಾರೆಂದು ಕೇರಳದ ಮುಖ್ಯ ಮಂತ್ರಿಗಳವರಿಗೆ ನಾನು ತಿಳುಹಿಸಿದ್ದೇನೆ."

ಸಾರ್ವಜನಿಕ ವಿಚಾರಣೆ

"ನಿಟ್ಟಕುಡಿ, ಗುಡಿರಳ್ಳಿ ಮತ್ತು ತಳಯಾರ್‌ಗಳಲ್ಲಿ ನಡೆದಿರುವ ಪೋಲೀಸ್ ಗೋಳೀಬಾರ್ ಘಟನೆಯನ್ನು ಸಾರ್ವಜನಿಕ ನ್ಯಾಯ ವಿಚಾರಣೆಗೊಳಪಡಿಸಬೇಕೆಂದು ಆಜ್ಞೆ ಹೊರಡಿಸಲಾಗುವುದು" ಎಂದೂ ಕೇರಳದ ನ್ಯಾಯಾಂಗ ಸಚಿವರಾದ ಶ್ರೀ ಕೃಷ್ಣ ಐಯರ್‌ರವರು ತಿಳುಹಿಸಿದ್ದಾರೆ. ಇವರು ಕೂಡಾ ಘಟನೆ ನಡೆದ ಸ್ಥಳಗಳಿಗೆ ಭೇಟಿಯಿತ್ತು ಬಂದಿರುವರು.

"ಅತ್ಯಂತ ಗಂಡಾಂತರ ಪರಿಸ್ಥಿತಿ ತೋರಿದರೆ ಮಾತ್ರ ಪೋಲೀಸರಿಗೆ ಗೋಳಿಬಾರ್ ಮಾಡಬೇಕೆಂದು ಸ್ಪಷ್ಟವಾಗಿ ತಿಳುಹಿಸಲಾಗಿದ್ದರೂ ಗೋಳಿಬಾರ್ ಮಾಡಿದ್ದಾರೆ. ಮಾಲೀಕರುಗಳ ವಿತ್ತಜೀವಿತಗಳ ರಕ್ಷಣೆಯ ಬಗ್ಗೆ ಎಲ್ಲಾ ಕ್ರಮಗಳನ್ನೂ ಕೈಕೊಳ್ಳಲಾಗಿತ್ತು, ಹಿಂಸಾತ್ಮಕ ಪಿಕೆಟಿಂಗ್ ಮತ್ತಿನ್ನಿತರ ಕೃತಿಗಳನ್ನು ತಡೆಯಲೂ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು" ಎಂದೂ ಶ್ರೀ ಕೃಷ್ಣ ಐಯ್ಯರ್‌ರವರು ತಿಳಿಸಿದ್ದಾರೆ.

ಅವಮಾನಕಾರಕ

"ಯಾವದೇ ಪ್ರಜಾರಾಜ್ಯದಲ್ಲಿ, ವಿಶೇಷವಾಗಿ ಕಮ್ಯೂನಿಸ್ಟ್ ಪಾರ್ಟಿ ನಾಯಕತ್ವದಲ್ಲಿಯ ಸರಕಾರದಲ್ಲಿ ನಡೆಯಬಾರದಂಥ ಘಟನೆಯಾಗಿದೆ" ಹೀಗೆ ತೋಟಗಳಲ್ಲಿ ನಡೆದ ಗೋಳೀಬಾರ್ ಬಗ್ಗೆ ತನ್ನ ವಿಷಾದವನ್ನು ವ್ಯಕ್ತಪಡಿಸುತ್ತ ಕೇರಳ ರಾಜ್ಯ ಕಮ್ಯೂನಿಸ್ಟ್ ಪಾರ್ಟಿಯ ಸೆಕ್ರೆಟರಿಯೇಟ್ ಪ್ರಕಟಣೆಯೊಂದನ್ನು ಹೊರಡಿಸಿ ತಿಳುಹಿಸಿದೆ.


ಹುತಾತ್ಮರಾದ ಕಾರ್ಮಿಕರಿಬ್ಬರ ಕುಟುಂಬಗಳಿಗೂ ನಾಲ್ವರು ಗಾಯಾಳುಗಳ ಮನೆಯವರಿಗೂ ತನಗಾದ ಸಂತಾಪವನ್ನು ಸೆಕ್ರೆಟರಿಯೆಟ್ ಸೂಚಿಸಿದೆ. ಸೆಕ್ರೆಟರಿಯೆಟ್ ಹೊರಡಿಸಿರುವ ಪ್ರಕಟಣೆಯಲ್ಲಿ ಹೀಗೆ ಹೇಳಲಾಗಿದೆ :

"ದೇವಿಕುಳಂನಲ್ಲಿ ಕಾನೂನು ಮತ್ತು ವ್ಯವಸ್ಥೆಗಳ ಹೊಣೆಗಾರಿಕೆಯನ್ನು ಹೊತ್ತಿದ್ದ ಪೋಲೀಸ್ ಅಧಿಕಾರಿಗಳಿಗೆ ಸರಕಾರದ ನೀತಿಯನ್ನು ಬೆಂಬಲಿಸುವದಾಗಲಿ, ಸಹಕಾರ ನೀಡುವದಾಗಲಿ ಬೇಕಾಗಿರದೆ ಜನ ಮರ್ದನಕ್ಕೆ ತೋಟಗಳ ಮಾಲಿಕರಿಗೆ ಸಹಾಯ ನೀಡುವುದು ಹೆಚ್ಚಾಗಿ ಬೇಕಾಗಿರುವಂತೆ ಕಾಣುತ್ತದೆ. ದುಡಿಯುವ ವರ್ಗದ ನ್ಯಾಯವಾದ ಹಾಗೂ ಶಾಂತಯುತವಾದ ಹೋರಾಟಗಳನ್ನು ಹತ್ತಿಕ್ಕಿ ಜನರನ್ನು ಕೆರಳಿಸುವುದು ಅವರಿಗೆ ಬೇಕಾದಂತಿದೆ. ಸ್ಥಳದ ಮೇಲಿನಿಂದ ಕಾರ್ಮಿಕ ಸಂಘದಿಂದ ಹಾಗೂ ನಾಯಕರುಗಳಿಂದ ನಮಗೆ ದೊರೆತಿರುವ ವರದಿಗಳ ಪ್ರಕಾರ "ಗೋಳಿಬಾರ್ ಅನಿರೀಕ್ಷಿತವೂ ಅನಗತ್ಯವೂ ಆಗಿತ್ತು" ಎಂದು ತಿಳಿದುಬರುತ್ತದೆ.

ಸಶಸ್ತ್ರ ಬಲದ ಬಳಕೆಗೆ ವಿರೋಧ

"ದುಡಿಯುವ ವರ್ಗದ ಮೇಲೆ ಗುಂಡು ಹಾರಿಸುವದಾಗಲಿ, ಸಶಸ್ತ್ರ ಬಲವನ್ನು

(೯ನೇ ಪುಟ ನೋಡಿ)



ಲೂ-ಶೂನ್ ಬರೆದ ಕತೆ

ಒಂದು ಸಣ್ಣ ಸಂಗತಿ

ಅನು: ದ. ರಾ. ಬೇಂದ್ರೆ

ನನ್ನ ಹಳ್ಳಿಯನ್ನು ಬಿಟ್ಟು ರಾಜಧಾನಿಗೆ ಬಂದು ಆರು ವರ್ಷಗಳಾದುವು. ಆರು ನಿಮಿಷಗಳಂತೆ ಹೋದವು. ಈ ಕಾಲದಲ್ಲಿ 'ರಾಜಕಾರಣ' ಎಂದೆನಿಸಿಕೊಳ್ಳಬಹುದಾದ ಅನೇಕ ಘಟನೆಗಳು ಸಂಭವಿಸಿದವು ಅದರಲ್ಲಿ ಕೆಲವನ್ನು ನಾನು ಕಂಡಿದ್ದೇನೆ. ಕೆಲವುಗಳ ಬಗ್ಗೆ ಕೇಳಿದ್ದೇನೆ. ಅವುಗಳೊಳಗಿನ ಯಾವೊಂದು ಮಾತೂ ನನ್ನ ಅಂತಃಕರುಣವನ್ನು ಒಂದಿಷ್ಟಾದರೂ ಕರಗಿಸಿದಂತೆ ತೋರುವುದಿಲ್ಲ. ಅಷ್ಟೇಕೆ, ಅವುಗಳ ನೆನಪೇ ನನ್ನನ್ನು ಕನಲಿಸಿ ಜನಗಳ ಬಗ್ಗೆ ನನಗಿರುವ ಸಹಾನುಭೂತಿಯನ್ನು ಕಾಲ ಕಳೆದಂತೆ ಕಡಿಮೆ ಮಾಡುತ್ತಿದೆ. ಆದರೆ ಒಂದೇ ಒಂದು ಸಣ್ಣ ಸಂಗತಿ ವಿಪುಲಾರ್ಥದಿಂದ ಕೂಡಿ ನನ್ನ ಎದೆಯಲ್ಲಿ ನಾಟ ನಿಂತಿದೆ. ಈಗಿನೀ ಕ್ಷಣಕ್ಕೂ ಅದನ್ನು ಮರೆಯಬೇಕೆಂದರೆ ನನ್ನಿಂದಾಗದು.

ಚಳಿಗಾಲದ ದಿನಸಗಳು. ಪ್ರಜಾಧಿಪತ್ಯದ ಆರನೆಯ ವರುಷ. ಬಡಗಣಿಂದ ಕಗ್ಗಾಳಿಯೊಂದು ಬಿರುಸಾಗಿ ಬೀಸಿತು. ಹೊಟ್ಟೆಯ ಪಾಡಿಗಾಗಿ ನಾನು ಬೆಳಗಿನಲ್ಲಿ ಬೇಗನೆದ್ದು ಹೋಗಬೇಕಾಗುತ್ತಿತ್ತು. ನನ್ನ ಕೆಲಸದ ಹಾದಿಯಲ್ಲಿ ಕ್ವಚಿತ್ತಾಗಿಯೇ ಯಾರದಾದರೂ ದರ್ಶನವಾಗುತ್ತಿತ್ತು. ಅಂದು ಸ್ವಲ್ಪ ಕಷ್ಟಪಟ್ಟ ಮೇಲೆ ಅಂತೂ ಕೊನೆಗೆ ಒಂದು 'ರಿಕ್‌ಷಾ'ವನ್ನು ಬಾಡಿಗೆ ಮಾಡಿ ಗೆದ್ದೆ. ಎಳೆಯುವವನಿಗೆ ತೆಂಕಣ ಬಾಗಿಲಿಗೆ ನನ್ನನ್ನು ಒಯ್ಯಬೇಕಾಗಿ ಹೇಳಿದೆ.

ಸ್ವಲ್ಪ ಹೊತ್ತಿನ ಮೇಲೆ ಗಾಳಿಯ ಗಡಸು ತಗ್ಗಿತು. ಅದು ಬೀಸಿ ಹೋದದ್ದರಿಂದ ಮಾತ್ರ ಹಾಳು-ಹುಡಿ ಹಾದಿಯಿಂದುಡುಗಿ ಹೋಯಿತು. ಎಳೆಯುವವನು ಬೇಗನೆ ಓಡಿದ. ತೆಂಕಣ ಬಾಗಿಲ ಬಳಿಗೆ ನಾವು ಬರುವ ಹೊತ್ತಿಗೇ ನಮ್ಮಿದಿರು ಯಾರೋ ಅಡ್ಡ ನುಗ್ಗಿದರು 'ರಿಕ್‌ಷಾ'ವಿನಲ್ಲಿ ಕಾಲ್ತೊಡರಿ ನೆಲಕ್ಕುರುಳಿದರು.

ಆಕೆ ಒಬ್ಬ ಹೆಂಗಸು. ತಲೆಯಲ್ಲಿ ಅಲ್ಲಲ್ಲಿ ಬಿಳಿ ಕೂದಲು. ಮೈಯಲ್ಲಿ ಹರಕು ಬಟ್ಟೆ. ಆಕೆ ಮಾರ್ಗದ ಒಂದು ಪಕ್ಕದಿಂದ ಭಿರ್ರನೆ ಬಾಣ ಬಿಟ್ಟಂತೆ ನುಗ್ಗಿ ನಮ್ಮನ್ನೇ ತಡೆಹಾಯ್ದಳು. ನನ್ನ 'ರಿಕ್‌ಷಾ' ಎಳೆಯುವವನು ಬದಿಗೆ ಸರಿಯಲು ಹವಣಿಸಿದ್ದ. ಆದರೆ ಆಕೆಯ ಹರಕು ಜಾಕೀಟು ಬಿರಡಿಯಿಲ್ಲದೆ ಗಾಳಿಯಲ್ಲಿ ಬಡೆದುಕೊಳ್ಳುವಾಗ ಗಾಡಿಯ (ಕಂಬಿ?)ಗೆ ಸಿಕ್ಕಿಕೊಂಡಿತು. ಸುದೈವದಿಂದ ಎಳೆಯುವವನು ತನ್ನ ವೇಗ ಕಡಿಮೆ ಮಾಡಿದ್ದ. ಇಲ್ಲದಿದ್ದರೆ ಆಕೆ ತಲೆ ಕೆಳಗಾಗಿ ಬೀಳಬಹುದಾಗಿತ್ತು. ಗಾಯವೂ ವಿಪರೀತವಾಗಬಹುದಾಗಿತ್ತು. ನಾವು ನಿಲ್ಲಿಸಿದಾಗಲೂ ಆ ಹೆಂಗಸು ನಾಗಾಲಾಗಿ ಇನ್ನೂ ಕೈವೂರಿದ್ದಳು. ಆಕೆಗೆ ಗಾಯವೇನಾದರೂ ಆಗಿರಬಹುದೆಂದು ನಾನು ತಿಳಿದಿರಲಿಲ್ಲ. ಈ ಡಕ್ಕಾ-ಡಿಕ್ಕಿಯನ್ನು ಬೇರೆ ಯಾರೂ ಕಂಡಿರಲೂ ಇಲ್ಲ. ಎಳೆಯುವವನು ಗಾಡಿ ನಿಲ್ಲಿಸಿ ಇಲ್ಲದ ಹುಚ್ಚು ಪೀಕಲಾಟದಲ್ಲಿ ತನ್ನನ್ನು ಕಾಣಾಕಾಣಾ ತೊಡಕಿಸಿಕೊಳ್ಳುತ್ತಿರುವನಲ್ಲಾ ಎಂದು ನಾನು ಕೆರಳಿದೆ. ತಡವಾಗುವದಲ್ಲದೆ ನನ್ನ ಪ್ರಯಾಣಕ್ಕೂ ಅದರಿಂದ ತಡೆಯಾಗಿತ್ತು. 'ಇದೇನು ಮಹಾ ?' ಎಂದು ನಾನು "ಹೊಡಿ ಮುಂದೆ" ಅಂದೆ. ಆದೇನು ಅವನಿಗೆ ಕೇಳಿಸಲಿಲ್ಲವೋ, ಏನು ಅವನ ದುರ್ಲಕ್ಷ್ಯವೋ ಅವನು ಗಾಡಿಯ ಕಂಬಿಯನ್ನು ಕೆಳಗಿರಿಸಿ ಆ ಮುದುಕಿಗೆ ಮೇಲಕ್ಕೇಳಲು ಮೆಲ್ಲಗೆ ಸಹಾಯ ನೀಡಿದನು. ಅವಳ ತೋಳು ಹಿಡಿದು ಆಧಾರ ಕೊಟ್ಟು ಅವಳನ್ನು ಕೇಳಿದ:

"ಎಲ್ಲ ಸರಿಯಾಗಿದೆಯೆ ?"

"ನಾನು ಗಾಯಗೊಂಡಿದ್ದೇನೆ."

ನಾನಂದೆ: "ಎಲಾ ! ನೀನು ಬೀಳುವದನ್ನು ನಾನು ಕಂಡಿದ್ದೇನೆ. ಪೆಟ್ಟು ಅಷ್ಟೇನು ಬಿರುಸಾಗಿರಲಿಲ್ಲ. ನಿನಗೆ ಹೇಗೆ ಗಾಯವಾಯಿತು ? ನೀನು ಸೋಗು ಮಾಡುತ್ತಿರುವೆ. ಛೀ, ಈ ವ್ಯವಹಾರವೇ ಅಸಹ್ಯ ! ಈ 'ರಿಕ್‌ಷಾ' ಬಂಡಿಯವನು ತನಗೇ ತೊಂದರೆ ತಂದೊಡ್ಡಿಕೊಳ್ಳುತ್ತಿದ್ದಾನೆ. ಈ ಅವ್ಯಾಪಾರದೊಳಗಿಂದ ತಾನು ಹೇಗೆ ಹೊರಬೀಳುತ್ತಾನೋ ಬೀಳಲಿ !"

ಗಾಡಿ ಎಳೆಯುವವನು ಮಾತ್ರ ಆ ಮುದುಕೆ ತನಗೆ ನೋವಾಗಿದೆಯೆಂದು ತಿಳಿಸಿದ ಮೇಲೆ ಕ್ಷಣವೂ ವಿಲಂಬ ಮಾಡಲಿಲ್ಲ. ಅವನಿನ್ನೂ ಅವಳ ತೋಳು ಹಿಡಿದು ಆಕೆಗೆ ಮುಂದು ಮುಂದಾಗಿ ಎಚ್ಚರದಿಂದ ಸಾಗಿದನು. ನನಗೆ ವಿಸ್ಮಯವಾಯಿತು. ಮುಂದೆ ಸ್ವಲ್ಪ ದೂರದಲ್ಲಿಯೇ ಇರುವ ಪೋಲೀಸ್ ಠಾಣ್ಯವು ಆಕಸ್ಮಾತ್ತಾಗಿ ನನ್ನ ಕಣ್ಣಿಗೆ ಬಿತ್ತು. ಇವನೋ ಈಕೆಯನ್ನು ಅಲ್ಲಿಗೆ ಒಯ್ಯುತ್ತಿದ್ದಾನೆ ! ಠಾಣ್ಯದ ಹೊರಗಾರೂ ನಿಂತಿರಲಿಲ್ಲ. ಅಂತೆ ಇವನು ಆಕೆಯನ್ನು ಬಾಗಿಲೊಳಕ್ಕೊಯ್ದನು.

ಅವರು ಅಲ್ಲಿ ಪ್ರವೇಶ ಮಾಡುತ್ತಿರುವಾಗಲೆ ನನಗೊಂದು ವಿಚಿತ್ರವಾದ ಅನುಭವ ಬಂತು. ಏನಾಯಿತೋ, ತಿಳಿಯೆ. ಒಮ್ಮಿಂದೊಮ್ಮೆಲೆ ಆ ಕ್ಷಣಕ್ಕೆ ಆ ಹುಡಿ ಮುಸುಕಿದ ಮೂರ್ತಿಯು ಮಹಾಕಾರವನ್ನು ತಾಳುತ್ತ ಅವನು ಮುಂದೆ ನಡೆ ನಡೆದಂತೆ ವಿರಾಟಾಕಾರವಾಗಿ ಅವನ ತಲೆಯೆತ್ತರ ಕಾಣಲು ನನಗೆ ಮೊಗ ಮೇಲಕ್ಕೆತ್ತಬೇಕಾಗಿ ಬಂತು. ಅದೇ ಕಾಲಕ್ಕೆ ಅವನತ್ತಣಿಂದ ಯಾವುದೋ ಒಂದು ಶಕ್ತಿಯು ನನ್ನನ್ನು ಸುತ್ತುಗಟ್ಟಿ ಮೈಯನ್ನು ಮುದ್ದೆ ಮಾಡಿದಂತಾಯಿತು. ನನ್ನ ಉಣ್ಣೆ ಬಟ್ಟೆಯ ನಿಲುವಂಗಿಯೊಳಡಗಿದ ಕ್ಷುದ್ರತನವನ್ನೆಲ್ಲ ನನ್ನಿಂದ ಹೊರದೂಡಿದಂತೆ ಆಗ ತೋರಿತು. ಶಕ್ತಿಪಾತವಾದಂತೆ ನಾನು ದುರ್ಬಲನಾದೆ. ರಕ್ತ ಹೆಪ್ಪುಗಟ್ಟಿದಂತೆ ಒಳಗೆ ಆದರ ಚಲನೆ ನಿಂತಿತು. ಅಲುಗದೆ ಮರವಟ್ಟು ವಿಚಾರರಹಿತನಾಗಿ ನಾನು ಕುಳಿತಿದ್ದೆ. ಆಗ ಆ ಠಾಣ್ಯದೊಳಗಿಂದ ಒಬ್ಬ ಅಧಿಕಾರಿಯು ಹೊರಬಿದ್ದನು. ಅವನು ನನ್ನ ಹತ್ತಿರ ಬರುತ್ತಿರುವಾಗಲೆ ನಾನು ರಿಕ್‌ಷಾವಿನಿಂದ ಕೆಳಗಿಳಿದೆ.

(೬ನೇ ಪುಟ ನೋಡಿ)

ತ್ರಿಪುರ ದಹನಕ್ಕೆ ಕರೆ!

ಬಂಡವಾಳದ ಭಂಡ, ಜಾತಿವಾದದ ಪುಂಡ,
ಸ್ವಾರ್ಥಸಾಧಕ ಮೊಂಡ ನೆಂಬರಿಲ್ಲಿ
ಭರತಖಂಡದಿ ತ್ರಿಪುರ ರಚಿಸಿಕೊಂಡವರೇನೆ
ಮನುಜಕುಲವನ್ನಿಂದು ಹಿಂಡುವಲ್ಲಿ,
ತೆರೆಯುತಲಿ ಕೆಂಗಣ್ಣ
ತೊರೆಯುತಲಿ ಮಹಾಮೌನ
ತ್ರಿಪುರ ದಹನದ ಕರೆಗೆ ಓಗುಡುವುದು,
ತ್ರಿಪುರಾರಿ ನರ-ಹರನ ಧರ್ಮವಾಹುದು !

★ ★

ಅಡಿಯಾಳು

ಸಾಸಿರ ಫಣಿಗಳ ಸಾಹಸ ಮಣಿಯಿದೊ
ತಾಳ್ಮೆಗೆ ತವರೂರಾಗಿಹನು ;
ಗಣನೆಗೆ ಮೀರಿಹ ವರುಷಗಳಿಂದಲೊ
ಭೂಮಂಡಲತಾಶ್ರಯನಹನು.
ವಿಶ್ವವೊ ಕುಣಿತದಿ ಮೈಮರೆಯುತ್ತಿದೆ
ಅಡಿಯಾಳಿನ ಋಣವನು ಮರೆದು
ಅಡಿಯಾಳ್ ಸಿಡಿದರೆ ಗತಿಯೇನಹುದೆಂ-
ಬರಿವಿಲ್ಲದೆ ಮೆರೆಯುತಲಿಹುದು !

— ಎಂ. ಅಕಬರ್ ಆಲಿ

ಕಾಂಗ್ರೆಸ್ಸಿನವರು ಮಾಡುತ್ತಿರುವ ಸೇವೆ

ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಒಂದು ಊರು. ಆ ಊರಿನಲ್ಲಿ ಕಾಂಗ್ರೆಸ್ಸು ಸಮಾಧಿ ಕಂಡು ಅದರ ಮೇಲೆ ಹುಲ್ಲು ಎಂದೋ ಬೆಳೆದಿದೆ. ಸಮಾಧಿಯ ಪಕ್ಕದಲ್ಲಿಂದ ಹಣಕಿಕ್ಕಿ ಅಣಕಿಕ್ಕಿವಂತೆ ಮೂರೇ ಮೂರು ಜನ ಇಡೀ ಊರಿಗೆ ಕಾಂಗ್ರೆಸ್ಸಿಗರು ಉಳಿದಿದ್ದಾರೆ. ಆ ಮೂವರೆಂದರೆ—ಒಬ್ಬರು ಬಡ್ಡೀ ವ್ಯವಹಾರ ಮಾಡುವವರು, ಇನ್ನೊಬ್ಬರು ಮಾಜೀ ಹೆಂಡದ ವ್ಯಾಪಾರಿಗಳು. ಮತ್ತೊಬ್ಬರು ದಲ್ಲಾಳಿಗಳು.

ಈ ಊರಿಗೆ ಇತ್ತೀಚೆಗೆ ಮೈಸೂರು ದೇಶದ ಮಾನ್ಯ ಸಚಿವರೊಬ್ಬರು ತೆರಳಿ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯಕರ್ತರನ್ನೆಲ್ಲ ಕಂಡು "ನೀವೆಲ್ಲ ಕಾಂಗ್ರೆಸ್ ಸೇರಬೇಕು. ನೀವೆಲ್ಲ ಕಾಂಗ್ರೆಸ್ ಸೇರಿದರೆ ರಾಷ್ಟ್ರಾಭಿವೃದ್ಧಿ ಬೇಗನೆ ಆಗುತ್ತದೆ" ಎಂದು ಮುಂತಾಗಿ ಬೋಧಿಸಿದರಂತೆ. ಹಳ್ಳಿಗಾಡಿನ ಜನತೆಯ ಆ ಕಾರ್ಯಕರ್ತರು ಕಾಂಗ್ರೆಸ್ ವಿಫಲತೆಯ ಪಟ್ಟಿಯನ್ನೇ ಒಪ್ಪಿಸಿ "ಯಾವ ಬಾಯಿಂದ ನೀವು ಹೀಗೆ ಹೇಳುತ್ತೀರಿ ? ನೀವೆ ಬನ್ನಿ ನಮ್ಮ ಜೊತೆಗೆ" ಎಂದು ಆಹ್ವಾನಿಸಿದರಂತೆ.

ದಿಗ್ಭ್ರಮೆಗೊಂಡ ಸಚಿವರು ಆ ಮೇಲೆ ತನ್ನ ಮೂವರು ಆಪ್ತ ಕಾಂಗ್ರೆಸ್ಸಿಗರೊಡನೆ ಕಾಂಗ್ರೆಸ್ ಪಕ್ಷದ ಬೆಳವಣಿಗೆಯ ಬಗ್ಗೆ ಆಪ್ತಾಲೋಚನೆ ನಡೆಸಿದರಂತೆ.

"ನೋಡಿ ಕಮ್ಯೂನಿಸ್ಟರು ಇಲ್ಲಿ ಬಲವಾಗಿ ಬೆಳೆದಿದ್ದಾರೆ. ಅವರೇ ಪ್ರಯತ್ನಪಟ್ಟು ಈ ಊರಿಗೆ ಒಂದು ಆಸ್ಪತ್ರೆಯನ್ನು ತಂದಿದ್ದಾರೆ. ಇಲ್ಲಿಂದ ೩-೪ ಮೈಲಿಯಲ್ಲಿ ಇನ್ನೊಂದು ಆಸ್ಪತ್ರೆಯಿದೆ. ಈ ಊರಿಗೆ ಆಸ್ಪತ್ರೆಯಾಕೆ ಬೇಕು ? ಅದನ್ನೆ ಕಿತ್ತುಹಾಕಿಬಿಟ್ಟರೆ ಅವರ ಜನಪ್ರಿಯತೆ ಕಳೆದುಹೋಗುವುದು. ಅಷ್ಟನ್ನು ಮಾಡಿಸಿ ಬಿಡಿ. ನಿಮಗೆ ಪುಣ್ಯ ಬರುತ್ತೆ. ಕಮ್ಯೂನಿಸ್ಟರ ಉಪಟಳ ತಾಳುವಂತಿಲ್ಲ. ಡಾಕ್ಟರೂ ಜನರ ಪಕ್ಷಪಾತಿಯಾಗಿದ್ದಾನೆ. ಅವನೂ ಹೊರಟುಹೋದರೆ ಕಮ್ಯೂನಿಸ್ಟ್ ಪಾರ್ಟಿ ತಾನೇ ಕುಪ್ಪಳಿಸುವುದು" ಎಂದು ಮುಂತಾಗಿ ಸಲಹೆಯಿತ್ತರಂತೆ.

"ಆದರೆ ಆಸ್ಪತ್ರೆ ಕಿತ್ತುಹಾಕುವುದು ಹೇಗೆ ?" ಎಂದು ಸಚಿವರು ನಿಸ್ಸಹಾಯಕರಾಗಿ ಗಂಟಲೊಣಗಿ ನುಡಿದರಂತೆ.

ಆಸ್ಪತ್ರೆ ಕಿತ್ತುಹಾಕುವುದಕ್ಕೆ ಬೆಂಗಳೂರಿನ ವರೆಗೂ ಪ್ರಯತ್ನ ನಡೆಯಿತು. ಇನ್ನೊಂದು ಕಡೆಯಿಂದ ಜನರ ಪ್ರತಿನಿಧಿಗಳೂ ಬಂದು "ಆ ಶ್ರೀಮಂತ ಮೂವರು ಔಷಧೋಪಚಾರಕ್ಕೆ ಬೆಂಗಳೂರಿಗೆ ತೆರಳಬಹುದು. ಆದರೆ ಬಡವರ ಗತಿಯೇನು?" ಎಂದು ಪ್ರತಿಪಾದಿಸಿದರಂತೆ.

ಆಸ್ಪತ್ರೆ
ಯಾಗಿ ಆ
ಸ್ ಪಕ್ಷವ
ನೋಡಿ
ತ್ತಿರುವ ಸೇ

೦

ಕೆಲವು
ಷ್ ಪತ್ರಿಕೆಗ
ಬರುತ್ತಿದೆ.
ದಕ್ಷಿಣ ಭಾ
ರ್ಸ್ ಅಸೋ
ವಿಷಯವ
ಯ ಸಂಬಂ
ನ್ನು ಕುರಿತು
ಬೇಕಾದಷ್ಟು
ಕೊಟ್ಟಿದ್ದೇವ
ಯದ ಸಂಪ
ಉದ್ಯಮ.
ಯಂತೆ ಈ
ತ್ತದೆ. ಆದ್ದ
ಸ್ಟೆಡ್ !)....

ನೀವೇನು ಹೇಳ…

ಇದರ
ಸ್ಪಷ್ಟವಾಗಿರ
ಕಾರದ ಮೇ
ಬಂಡವಾಳಗ
ಡುತ್ತಿದ್ದಾರೆ
ಕಾಂಗ್ರೆಸ್
ಬಿಗಿದು ಅಪ
ಬಂಡವಾಳಗ
ಪ್ರಚಾರ ನಡೆ
ಅವರೆತ್ತಿದ
ತಥ್ಯವಿಲ್ಲ.
ಚಿಮ್ಮುವುದು
ಬರೀ ಕೇರಳ
ರಾಷ್ಟ್ರಕ್ಕೇ ಸ
ಉದ್ಯಮವನ
ಕ್ಕೆ ನಷ್ಟವನ್ನು
ನ್ನು ಎಂಥ
ಡಲಾರದು.
ದ ಅಭಿವೃದ್ಧಿ
ಚಿಂತನೆಯನ
ಬಂದರೆ ನಷ್ಟ
ಪನ್ ದೊರೆಗ
ಬಂಡವಾ
ಮುಖವನ್ನು
ಮುಖ್ಯ ಕೆಲ
ಪ್ರಮುಖ ಇಂ
ಈಗ ಪ್ರಕಟ
ಸ್ಥಳ ನೋಡಿ
ದು ಸಲಕ್ಕೆ ಚ
ಳಗೆ ಕಡಮೆಯ
160 ರೂಪಾ
ಲೆಕ್ಕದಲ್ಲಿ ೫-
ಖರ್ಚಿನ ಲೆ
ಇಷ್ಟು ಹಣ
ದ ಇವರ ಮ
(೬ನೇ

ಳಿವಿದೆ. ಪ್ರತಿ
ಒಬ್ಬರು ಕಾಂಗ್ರೆ
ಸ್ಸಾರಂತೆ.
ಗ್ರೆಸ್ಸಿನವರು ಮಾ

o

ಆಗಾಗ ಇಂಗ್ಲೀ
ಜಾಹೀರಾತು
ಪ್ರಕಟಿಸುವವರು
ಟೆಡ್ ಪ್ಲಾಂಟ
ನವರು.
ರಳದ ವ್ಯವಸಾ
ತೆ (1957)ಯ
ರ್ಮಿಕರಿಗೆ ನಾವು
ವನ್ನು ಒದಗಿಸಿ
ವಿದೇಶಿ ವಿನಿಮ
ಇದು ದೊಡ್ಡ
ಈ ಮಸೂದೆ
ಧಕ್ಕೆಯೊದಗು
ರ್ಥ: ಅಂಡರ್

...ರಿ

ಗಲೇ ನಿಮಗೆ
ಕೇರಳ ಸರ
ಕಾರ ನಡೆಸಲು
ಪಾತ್ರವನ್ನಾ
ಇದು ಸಾಕ್ಷಿ.
ಗಳು ಭಾಷಣ
ಡೆಸಿದರೆ ಅವರ
ದ್ದು ತೆತ್ತು ಅಪ

ಳಲ್ಲಿ ಏನೇನೂ
ಬರೀ ಕೆಸರು
ಷನ್ ವಿಚಾರ
ಸಂಬಂಧಿಸಿಲ್ಲ,
ದಾಗಿದೆ. ಈ
ಗೊಳಿಸಿ ರಾಷ್ಟ್ರ
ಡುವ ಕಾರ್ಯವ
ರವೂ ಮಾ
ಷನ್ ಉದ್ಯಮ
ಕಾರ್ಮಿಕರ ಹಿತ
ವ ಕಾನೂನು
ಈ ಪ್ಲಾಂಟೇ

ತಿಯ ಒಂದು
ಸುವುದೇ ನನ್ನ
ರಾಸಿನ ಒಂದು
ನ ಪತ್ರಿಕೆಯಲ್ಲಿ
ಜಾಹೀರಾತಿನ
ರುಪಂಕ್ತಿ—ಒಂ
ರೂಪಾಯಿಗ
ದು ದಿನವಾದರೆ
ಕಡಿಮೆ ಇದೇ
ಜಾಹೀರಾತು
ಸಿಸ್ಬಾದೀತು ?
ದಲು ಸಿದ್ಧರಾ
ಸ್ಪಷ್ಟ ಒಂದೇ
ಡ)

ದೇವರಿಗೂ ಲಾಕೌಟ್

ಬೆಂಗಳೂರಿನ ಮಿಲ್ ಮಾಲೀಕರೊಬ್ಬರು ದೇವಸ್ಥಾನಕ್ಕೂ ಲಾಕೌಟ್ ಮಾಡಿದ ಸ್ವಾರಸ್ಯಕರ ವರದಿಯೊಂದು ನಮ್ಮ ಕಡೆಗೆ ಬಂದಿದೆ.

ಸದರೀ ಮಿಲ್ ಮಾಲೀಕರು ತಮ್ಮ ಕಾರ್ಮಿಕರ ಸಂಬಳದಲ್ಲಿ ಆಗಾಗ ಒಂದಿಷ್ಟು ಹಣ ಕಿತ್ತುಕೊಂಡು ತಾವೂ ಒಂದಿಷ್ಟು ಸೇರಿಸಿ ದೇವಸ್ಥಾನವೊಂದನ್ನು ಕಟ್ಟಿದ್ದಾರೆ. ಈದೇವರ ಕೃಪೆಯಿಂದಲೇ ತಮ್ಮ ಉದ್ಯಮದ ಅಭಿವೃದ್ಧಿಯಾಗಿದೆಯೆಂದೂ, ಆ ದೇವರೇ ತಮ್ಮ ಸಿರಿಸಂಪತ್ತನ್ನೂ, ತಮ್ಮ ಉದ್ಯಮದಲ್ಲಿ ಯಶಸ್ಸನ್ನೂ ಸಂಪಾದಿಸಿಕೊಡುವನೆಂದೂ ಮಾಲೀಕರ ನಂಬಿಕೆ. ಅಂತೆಯೇ ಅವರು ಜೀವಂತ ಮನುಷ್ಯರ, ದುಡಿಯುವ ಜನತೆಗೂ ಸಲ್ಲದ ಸತ್ಕಾರ-ಪೂಜೆ-ಪುನಸ್ಕಾರಗಳನ್ನು ದೇವರಿಗೆ ಸಲ್ಲಿಸುತ್ತಾರೆ, ಸಲ್ಲಿಸುತ್ತಿದ್ದಾರೆ. ಈ ಸುಬ್ರಹ್ಮಣ್ಯ ಸ್ವಾಮಿಯ ಮೇಲೆ ಅವರಿಗೆ ತುಂಬ ಭಕ್ತಿ.

ಇವರ ಮಿಲ್ಲಿನಲ್ಲಿ ಕಾರ್ಮಿಕರಿಗೂ ಇವರಿಗೂ ನಡೆದ ವಿವಾದದ ಪರಿಣಾಮವಾಗಿ ಮಿಲ್ಲು ಲಾಕ್‌ಔಟ್ ಮಾಡಲ್ಪಟ್ಟಿದೆ. ಕಾರ್ಮಿಕರ ಸ್ಥಿತಿ ತೀರಾ ಹದಗೆಟ್ಟು ಹೋಗಿದೆ.

ಮಾಲೀಕರು ವಿವಂಚನೆಗೊಳಗಾಗಿದ್ದಾರೆ. ಲಾಕ್‌ಔಟ್ ಸಮಸ್ಯಾಪರಿಹಾರಕ್ಕೆ ಕಾರ್ಮಿಕರಿಗೆ, ಅವರ ನಾಯಕರಿಗೆ ಮೊರೆಹೋಗಲಾರದ ಮಾಲೀಕರು ದೇವರಿಗೆ ಮೊರೆಹೊಕ್ಕರು.

ಅರ್ಚಕನನ್ನು ಕರೆಸಿ ದೇವರ ತಲೆಯ ಮೇಲೆ ಹೂ ಹಾಕಬೇಕೆಂದು ನಿರ್ಧಾರವಾಯಿತು. ದೇವರ ತಲೆಯ ಮೇಲಿನ ಹೂ ಎಡಗಡೆಗೆ ಬಿದ್ದರೆ ಕಾರ್ಮಿಕರಿಗೆ ವಿಜಯವೆಂದೂ, ಬಲಗಡೆಗೆ ಬಿದ್ದರೆ ತಮಗೆ ವಿಜಯವೆಂದೂ ಮನಸ್ಸಿನಲ್ಲಿ ಬೇಡಿಕೊಂಡರು.

.... ಪೂಜಾರಿಗಳು — [ಮಾಲೀಕರ ಮತ್ತು ದೇವರು ಇವರ ಮಧ್ಯೆ ಏಜಂಟರು—] ಅನನ್ಯ ಭಕ್ತಿಭಾವದಿಂದ ದೇವರ ತಲೆಯ ಮೇಲೆ ಹೂ ಇಟ್ಟರು. ಮಾಲೀಕರು ಕುತೂಹಲದಿಂದ ನಿರೀಕ್ಷಿಸುತ್ತ ಕೈ ಮುಗಿದುಕೊಂಡು ನಿಂತಿದ್ದರು.

.... ಹೂ ಉರುಳಿತು, ಬಿದ್ದೇ ಬಿತ್ತು. ಆದರೆ ಎಡಗಡೆಗೆ !

ಮಾಲೀಕರ ನೀತಿಯನ್ನು ಪ್ರತಿಭಟಿಸಿ ಅವರ ದೇವರೂ ಎಡಪಕ್ಷಕ್ಕೆ ಸೇರಿಕೊಂಡಿದ್ದ ! (ದೇವರಿಗೂ ಗೊತ್ತಿರಬೇಕು — ತನಗೆ ನೆರಳು ಕಟ್ಟಿಕೊಟ್ಟವನೂ ಬಡ ಕಾರ್ಮಿಕನೇ ಎಂದು).

ಆದರೆ ಮಾಲೀಕರು ದೇವರ ಮೇಲೆ ಹೇಗೆ ತಾನೆ ಗದೆ ಎತ್ತಿಯಾರು ?

.... ಪೂಜಾರಿಯನ್ನು ಬಾಯಿಗೆ ಬಂದಂತೆ ಸಿಕ್ಕಾಬಟ್ಟೆ ಬೈದು ದೇವಸ್ಥಾನದಿಂದ ಹೊರಗೆ ಹಾಕಿದರು.

.... ದೇವಸ್ಥಾನದ ಬಾಗಿಲಿಗೆ ಬೀಗ ಬಿತ್ತು !

ಚೀನೀ ಸಾಹಿತ್ಯ-ಸಾಂಸ್ಕೃತಿಕ ರಂಗದ ಯೋಧ ಬರೆಹಗಾರ ಲೂ-ಶೂನ್

ಆಧುನಿಕ ಚೀನೀ ಸಾಹಿತ್ಯದ ಆಚಾರ್ಯ ಪುರುಷ ಲೂ-ಶೂನ್. ಶತಮಾನಗಳ ಕಾಲ ಚೀನಿ ಸಾಹಿತ್ಯದಲ್ಲಿ ಭದ್ರವಾಗಿ ಬೇರುಬಿಟ್ಟಿದ್ದ ಹಳೆಯ ಕಂದಾಚಾರಗಳನ್ನೂ ವಿಧಿನಿಷೇಧಗಳನ್ನೂ ಮುರಿದು ಕಿತ್ತೊಗೆದು ವಾಸ್ತವವಾದಿ ಮಾನವೀಯ ಸಾಹಿತ್ಯದ ನಾಂದಿಯನ್ನು ಹಾಡಿದ ಸಾಹಿತ್ಯ ಬಂಟರವರು. ಲೂ-ಶೂನ್ ಸಾಹಿತ್ಯದಲ್ಲಿ ಮಾತ್ರ ಬಂಡಾಯಗಾರನಾಗಲಿಲ್ಲ. ಅರೆ ವಸಾಹತುಶಾಹಿ, ಅರೆ ಸಾಮ್ರಾಜ್ಯಶಾಹಿ ಮತ್ತು ಪಾಳೆಯಗಾರಿಕೆ ವ್ಯವಸ್ಥೆಯಲಿ ಬೆಂದು ಬಸವಳಿದು ಕೊನೆಗೆ ಕೆರಳಿ ಕನಲಿ ಮೇಲೆದ್ದ ವಿಮೋಚನಾ ಹೋರಾಟದ ಅಂಗವಾಗಿ ಕ್ರಾಂತಿಕಾರಿಯಾಗಿ ಬಂಡೆದ್ದ ಗಂಡುಗಲಿ, ಜನರನ್ನು ಅದಕ್ಕೆ ಸಜ್ಜುಗೊಳಿಸಿದ ಮಹಾನಾಯಕರೂ ಹೌದು. ಚೀನಿ ಸಾಂಸ್ಕೃತಿಕ ಚಳವಳದ ಮುಂದಾಳುವೂ ಹೌದು.

o o o

ಲೂ-ಶೂನ್ ಬರೆದಿರುವ ಪ್ರಬಂಧಗಳ, ಗದ್ಯ ಗೀತೆಗಳ, ಸ್ಮರಣೆಗಳ ೧೬ ಸಂಪುಟಗಳು, ಮೂರು ಕಥಾಸಂಕಲನಗಳು ಚೀನಿ ಜನತೆಯ ಜೀವನದ, ಹೋರಾಟದ, ಅವರ ಸುಖ ದುಃಖಗಳ, ಚೀನಿ ಸಮಾಜದ ಎನ್‌ಸೈಕ್ಲೋಪೀಡಿಯಾ ಎಂದು ಪ್ರಸಿದ್ಧ ವಿಮರ್ಶಕ ಫೆಂಗ್-ಶೂ-ಫೆಂಗ್ ಹೇಳುತ್ತಾರೆ. ೨೦ನೇ ಶತಮಾನದ ಆರಂಭದಿಂದ ೧೯೩೦ರ ವರೆಗಿನ ಕಾಲಾವಧಿಯಲ್ಲಿ ನಡೆದ ಮಹಾ ಹೋರಾಟಗಳ ಐತಿಹಾಸಿಕ ಘಟನೆಗಳ ಕನ್ನಡಿಯಾಗಿವೆ ಇವು. ಜನಮರ್ದಕ ಶಕ್ತಿಗಳ ವಿರುದ್ಧ ಸಾರಿರುವ ಯುದ್ಧ ಘೋಷಣೆಗಳಾಗಿವೆ ಇವು.

o o o

ಇಂಥ ಸಾಹಿತಿಯ ಕೃತಿಗಳು ಕೇವಲ ಪ್ರಚಾರ ಸಾಹಿತ್ಯವಾಗುಳಿಯುವ ಭೀತಿಯಿರುತ್ತದೆ. ಆದರೆ ಲೂ-ಶೂನ್‌ರ ಸಾಹಿತ್ಯ ಮಾತ್ರ ಹಾಗಾಗ

ಸಪ್ತಾಹ ಸ್ಫೂರ್ತಿ

ಲಿಲ್ಲ. ಅವರ ಕತೆಗಳು ಒಂದೊಂದೂ ಹೃದಯವನ್ನು ಹಿಡಿದು ಅಲ್ಲಾಡಿಸುತ್ತವೆ, ಅವರ ಬರೆಹ ಅತ್ಯಂತ ಶಕ್ತಿಪೂರ್ಣವಾದುದು, ನೇರವಾದುದು, ಮೊನಚಾದುದು. ಅವರು ಮೊಟ್ಟಮೊದಲು ಬರೆದ ಕತೆ "ಹುಚ್ಚನ ದಿನಚರಿ" ಎಂಬುದು ('ಜನಯುಗ'ದಲ್ಲಿ ಪ್ರಕಟವಾಗಿರುವ ಈ ಕತೆಯನ್ನು 'ಜನಶಕ್ತಿ'ಯ ಓದುಗರು ಆಗಲೇ ಓದಿರಬೇಕು). ಈ ಕತೆಯಲ್ಲಿ ಅವರು ಪಾಳೆಯಗಾರಿಕೆಯ ವಿಚಾರ ಹಾಗೂ ನೈತಿಕತೆಯ ಮೇಲೆ ನಿರ್ದಯಿಯಾಗಿ ಕಠೋರವಾದ ಧಾಳಿಯನ್ನು ನಡೆಸಿದ್ದಾರೆ. ಕತೆಯ ಕೊನೆಯ ವಾಕ್ಯ "ಮಕ್ಕಳನ್ನು ರಕ್ಷಿಸಿ" ಎಂಬುದು ಪಾಳೆಯಗಾರಿಕೆ ನೈತಿಕತೆಯಿಂದ ಹರಿದು ತಿನ್ನಲ್ಪಟ್ಟವರೆಲ್ಲರ ಪ್ರತಿಧ್ವನಿಯಾಗಿದೆ. ಇದರ ಹಿಂದೆಯೇ ಇನ್ನೂ ೩೩ ಕತೆಗಳು ಬಂದುವು. ಈ ಕತೆಗಳಿಗೆ ಲೂ-ಶೂನ್ ವಸ್ತುವನ್ನು ಪಡೆದುದು ರೋಗಗ್ರಸ್ತ ಸಮಾಜದ "ಕೆಳ ಆಳ"ದಿಂದ ಅಥವಾ ಇತಿಹಾಸದಿಂದ. "ಅ ಕ್ಯೂನ ಸತ್ಯ ಕತೆ" ಎಂಬ ನೀಳ್ಗತೆಯಂತೂ ಲೂ-ಶೂನ್ ಬರೆದ ಅಮರ ಕತೆ. ಸಮಕಾಲೀನ ಸಮಾಜದ ಅಧಃಪಾತವನ್ನು ಬಲು ಮಾರ್ಮಿಕವಾಗಿ ಇದರಲ್ಲಿ ಅವರು ಚಿತ್ರಿಸಿರುವರಲ್ಲದೆ ೧೯೧೧ರ ಕ್ರಾಂತಿಯ ವಿಫಲತೆಯನ್ನು ಚೆನ್ನಾಗಿ ಬಿಡಿಸಿದ್ದಾರೆ.

ಲೂ-ಶೂನರ ಕತೆಗಳಿಗಿಂತಲೂ ಯಶಸ್ವಿಯಾದ ಕೃತಿಗಳು ಅವರು ಬರೆದ ಪ್ರಬಂಧಗಳು, ಗದ್ಯಗೀತೆಗಳು. ಇವುಗಳನ್ನು ಅವರು ತಮ್ಮ "ಖಡ್ಗಗಳು" "ಈಟಿ"ಗಳು ಎಂದು ಕರೆದಿದ್ದಾರೆ. ಕ್ರಾಂತಿಯ ಮೂಲಭೂತ ಸಮಸ್ಯೆಗ



೫೦ನೇ ವಯಸ್ಸಿನಲ್ಲಿ ಲೂ-ಶೂನ್

ಳಿಂದ ಹಿಡಿದು ಮಕ್ಕಳ ಆಟಿಕೆಯ ವರೆಗಿನ ವಿಷಯಗಳನ್ನೊಳಗೊಂಡ ಈ ಬರೆಹಗಳು ಸಮಾಜ ಶತೃಗಳು, ಸಾಮ್ರಾಜ್ಯಶಾಹಿಗಳು, ಯುದ್ಧಖೋರರು, ಇವರ ಮೇಲೆ ನಡೆಸಿದ ಧಾಳಿಗಳಾಗಿವೆ. ಇವುಗಳಲ್ಲಿ ಕ್ರೂರ ವ್ಯಂಗ್ಯವಿದೆ, ತಿಳಿಹಾಸ್ಯವಿದೆ, ಇವು ಪ್ರಾಮಾಣಿಕವಾಗಿವೆ, ಸತ್ಯತೆಯಿಂದ ಕೂಡಿವೆ. ಹೀಗಿದ್ದರೂ ಲೂ-ಶೂನ್ ಸಿನಿಕ್‌ನಾಗಿ "ಪ್ರಪಂಚದಲ್ಲಿ ಎಲ್ಲವೂ ಕೆಟ್ಟದ್ದು ಸುಧಾರಿಸುವುದು ಸಾಧ್ಯವೇ ಇಲ್ಲ" ಎಂದು ಎಲ್ಲೂ ಬೋಧಿಸಲಿಲ್ಲ. ಇಷ್ಟೇ ಅಲ್ಲ, ಇಂಥ ಸಿನಿಕತನವನ್ನೂ ಕಟುವಾಗಿ ಖಂಡಿಸಿದ್ದಾರೆ. ಇಂಥ ಪ್ರಬಂಧಗಳ ೬-೭ ನೂರು ಇವೆ.

o o o

ಲೂ-ಶೂನ್ ಆರಂಭದಲ್ಲಿ ಉತ್ಕ್ರಾಂತಿಯಲ್ಲಿ–ಕ್ರಮೇಣ ಕ್ರಾಂತಿಯಲ್ಲಿ, ಸ್ವಾಭಾವಿಕ ಪ್ರಗತಿಯಲ್ಲಿ ವಿಶ್ವಾಸವಿಟ್ಟವರಾಗಿದ್ದರು. ಆದರೆ ಇದೊಂದು ಭ್ರಮೆ ಎಂಬುದು ಅವರಿಗಾದ ಅನುಭವಗಳು ತಿಳಿಸಿದವು. ಆಗಲೇ ಅವರು ವಾಮಪಕ್ಷೀಯ ಬರೆಹಗಾರರ ಸಂಘವನ್ನು ಕಟ್ಟಿದರು.

ಅವರು ಕ್ಯಾಂಟನಿನ್ನ ಸನ್-ಯತ್-ಸೇನ್ ವಿಶ್ವವಿದ್ಯಾನಿಲಯದಲ್ಲಿ ಸಾಹಿತ್ಯ ವಿಭಾಗದ ನಿರ್ದೇಶಕರಾಗಿದ್ದಾಗ (೧೯೨೭) ಚೀಯಾಂಗ್ ಕೈಷೇಕ್ ಕ್ರಾಂತಿಗೆ ಬಗೆದ ದ್ರೋಹ, ಚೀನಿ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರ ಹಾಗೂ ಯುವಕರ ಸಾಮೂಹಿಕ ಕಗ್ಗೊಲೆ, ಬಂಧನಗಳು, ಸ್ವತಃ ತಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಮೇಲೆ ನಡೆದ ಧಾಳಿ–ಬಂಧನ ಸತ್ರಗಳು ಇವನ್ನು ಕಂಡು ರೋಷತಪ್ತರಾಗಿ ಪ್ರತಿಭಟಿಸಿ ರಾಜೀನಾಮೆಯಿತ್ತು ಹೊರಬಂದರು. ಅವರ ಮೇಲೆ ಚೀಯಾಂಗ್ ಕೈಶೇಕನ ಧಾಳಿ ಆರಂಭವಾಯಿತು. ಅವರು ಬಾಳುವದೇ ಕಷ್ಟವಾಯಿತು.

"ವಿವಿಧ ರಾಜಕೀಯ ಪಕ್ಷಗಳಿರುವ ರಾಜ್ಯ ವ್ಯವಸ್ಥೆ ನಮಗೆ ಹೊಂದುವಂಥದಲ್ಲ" ಎಂದು ಕಲಕತ್ತದಲ್ಲಿ ಜಯಪ್ರಕಾಶನಾರಾಯಣರ ಹೇಳಿಕೆ.

ಗೊತ್ತುವಳಿ

ಮಂಡಿಸಿದವರು :
ಜಯಪ್ರಕಾಶನಾರಾಯಣ್
ಕಾರ್‍ಯಗತವಾಗಿಸಿದವರು :
ಮಿರ್ಜಾ ಇಸ್ಕಂದರ್

ಈ ಘಟನೆಗಳು ಲೂ-ಶೂನ್‌ರಿಗೆ ಉತ್ಕ್ರಾಂತಿಯಲ್ಲಿದ್ದ ನಂಬುಗೆಗಳನ್ನು ಸಂಪೂರ್ಣ ನಾಶ ಮಾಡಿದುವು. ಇಲ್ಲಿಯವರೆಗೆ ಇದರಲ್ಲಿ ನಂಬಿಕೆಯಿಟ್ಟುದುದು ಮಹಾ ತಪ್ಪು ಎಂದು ತಪ್ಪೊಪ್ಪಿಕೊಳ್ಳುವ ವಿಸ್ತಾರವಾದ ಪ್ರಬಂಧವನ್ನೇ ಬರೆದರು.

೧೯೩೩ರಲ್ಲಿ ಲೂ-ಶೂನರ ಪ್ರಬಂಧ ಸಂಕಲನವೊಂದಕ್ಕೆ ಮುನ್ನುಡಿ ಬರೆಯುತ್ತ ಚೂ ಚಿ ಯು. ಪಾಯ್ (ಒಬ್ಬ ಕ್ರಾಂತಿಕಾರಿ ಮತ್ತು ಬರೆಹಗಾರು) ಹೀಗೆ ಬರೆದರು :

"ಲೂ-ಶೂ ಉತ್ಕ್ರಾಂತಿ ತತ್ವದಿಂದ ವರ್ಗಕಲಹದ ತತ್ವದವರೆಗೆ ಸಾಗಿ ಬಂದಿದ್ದಾರೆ. ...ಅವರು ಕಾರ್ಮಿಕರ ನಿಜವಾದ ಸ್ನೇಹಿತ ಮತ್ತು ದುಡಿಯುವ ಜನತೆಯ ಮುಂದಳದ ಅಭಿಮನ್ಯುವಾಗಿದ್ದಾರೆ. ೧೯೧೧ರ ಕ್ರಾಂತಿಯ ಕಾಲಕ್ಕಿಂತ ಮೊದಲಿನಿಂದ ಇಲ್ಲಿಯ ವರೆಗಿನ ೨೫ ವರುಷಗಳ ಕ್ರಾಂತಿಕಾರಿ ಹೋರಾಟಗಳ ಅನುಭವ ಅವರಿಗಿದೆ. ಅತ್ಯಂತ ಕಷ್ಟತರದಿಂದ ಹಾಗೂ ಸೂಕ್ಷ್ಮ ನಿರೀಕ್ಷಣೆಯಿಂದ ಅತ್ಯಮೂಲ್ಯವಾದ ಕ್ರಾಂತಿಕಾರಿ ಜ್ಞಾನಗಳಿಂದ ಅವರು ಶ್ರೀಮಂತರಾಗಿ ಹೊಸ ಶಿಬಿರವನ್ನು ಸೇರಿದ್ದಾರೆ."

ಕಾರ್ಮಿಕರ ಕೈವಾರಿಯಾಗಿ ಈ ಮಹಾ ಸಾಹಿತಿ ತಮ್ಮ ಜೀವಮಾನದುದ್ದಕ್ಕೂ ಹೋರಾಡಿದ್ದಾರೆ. ಗಾರ್ಕಿ ಹಾಗೂ ಲೂ-ಶೂನ್‌ರ ಬಗ್ಗೆ ಎಡ್ಗರ್ ಸ್ನೋ ಅವರು ಬರೆಯುತ್ತ ಹೀಗೆ ಹೇಳುತ್ತಾರೆ:

"ಗಾರ್ಕಿಯಂತೆ ಲೂ-ಶೂನರು ಕ್ರಾಂತಿಯ ರಾಜಕೀಯ ಅಂಗಕ್ಕಿಂತ ಸಾಮಾಜಿಕ ಸಾಂಸ್ಕೃತಿಕ ಅಂಗಗಳನ್ನು ಹೆಚ್ಚು ಮನನ ಮಾಡಿಕೊಂಡಿದ್ದಾರೆ. ಜೀವನದಲ್ಲಿ ಮತ್ತು ಅವರ ಕೃತಿಗಳಲ್ಲಿ ಅವರು ಮುಖ್ಯತಃ ತಮ್ಮದೇ ಆದ ಹಾದಿಯನ್ನು ಹಿಡಿದಿದ್ದಾರೆ. ಸಮಾಜವಾದದಲ್ಲಿಯ ಅವರ ನಂಬಿಕೆ ತಾರ್ಕಿಕ ಚರ್ಚೆ ವಿದ್ಯಾವ್ಯಾಸಂಗಗಳ ತಳಹದಿಯ ಮೇಲೆ ನಿಂತಿರದೆ ಜನಸಮೂ

"ವೀತಾಶೋಕ"

ಹದ ಆರ್ಥಿಕ, ನೈತಿಕ ಆಶೆ-ಆಕಾಂಕ್ಷೆಗಳ ವಿಷಯದಲ್ಲಿಯ ವೈಯಕ್ತಿಕ ಅನುಭವದ ಮೇಲೆಯೆ ನಿಂತಿದೆ. "ಕಲೆಗಾಗಿ ಕಲೆ" ಎಂದಾಗ ಅವರು ಮೂಗು ಮುರಿಯುತ್ತಾರೆ. ಲೇಖನಗಳ ಮಹತ್ವ ಕೇವಲ ಪ್ರಚಾರಾತ್ಮಕ ಸಂದೇಶದಲ್ಲಿಯೆ ಇದೆ ಎಂದೂ ಅವರ ನಂಬಿಕೆ. ಆದರೆ ಅವರ ಅಭಿಪ್ರಾಯ ಏನೇ ಇರಲಿ, ಅವರ ಕೃತಿಗಳೆಲ್ಲ ಕಲಾಪೂರ್ಣವಾಗಿವೆ. ಅವರ ಕಲೆ ಇಂದಿನ ಚೀನದಲ್ಲಿ ಹುಟ್ಟಿಬಂದ ಯಾವ ಪ್ರತಿಭಾಪೂರ್ಣ ಕಲೆಗಿಂತಲೂ ಕಡಿಮೆಯಾಗಿಲ್ಲ."

ಹೀಗೆಂದು ಅವರು ಸಾಹಿತ್ಯಿಕ-ಸಾಂಸ್ಕೃತಿಕ ಮಹಾಪ್ರತಿನಿಧಿಯಾಗಿ ನೂತನ ಚೀನದ ಸೃಷ್ಟಿಯಲ್ಲಿ ಪರಿಶ್ರಮವಹಿಸಿದ್ದಾರೆ, ವಿಜೇತರಾಗಿದ್ದಾರೆ.

ಅಧ್ಯಕ್ಷ ಮಾವ್ರೋತ್ಸೆ ತುಂಗ್ ಲೂ-ಶೂನ್ ಬಗ್ಗೆ On New Democracyಯಲ್ಲಿ ಬರೆಯುತ್ತ "ಅವರೊಬ್ಬರು ಕೇವಲ ದೊಡ್ಡ ಸಾಹಿತಿಗಳಾಗಿರಲಿಲ್ಲ, ಮಹಾವಿಚಾರವಾದಿಗಳೂ, ಮಹಾಕ್ರಾಂತಿಕಾರಿಗಳೂ ಆಗಿದ್ದರು" ಎಂದಿದ್ದಾರೆ.

ಈ ಕ್ರಾಂತಿಕಾರಿ ೧೯೩೬ರ ಅಕ್ಟೋಬರ್ ೧೯ರಂದು ಶಾಂಘಾಯಿಯಲ್ಲಿ ನಿಧನರಾದರು. ಅಗೆ ವರಿಗೆ ೫೫ ವರುಷಗಳಾಗಿದ್ದವು. ಚೀನದ ಕ್ರಾಂತಿಕಾರೀ ಸಾಹಿತ್ಯವನ್ನು ಶ್ರೀಮಂತನಾಗಿಸಿ ಲೂ-ಶೂನ್, ತೆರಳಿದ್ದಾರೆ. ಈ ಮಹಾ ಸಾಹಿತಿಯ ಕೃತಿಗಳ ಪರಿಚಯ ಕನ್ನಡ ಓದುಗರಿಗಾಗಲೇ ಬೇಕಾಗಿದೆ. ಕನ್ನಡ ಸಾಹಿತ್ಯದ ಸಂಪತ್ತಿಗೂ ಅಗತ್ಯವಾಗಿದೆ. ಅಂಥ ಕಾಲವೂ ಬರಲಿ. [illegible] ಪ್ಟಂಬರ್ ೨೫ (೧೮೮೧) ಲೂ-ಶೂನ್ ಹುಟ್ಟಿದ ದಿನ. ಈ ಲೇಖನದ ಮೂಲಕ [illegible] ಗೆ ರವದಿಂದ ಸ್ಮರಿಸೋಣ.

ಪುರಿಗಾಳು

ಜಿಂಬೂ ಸವಾರಿಯನ್ನು ಪ್ರತಿಭಟಿಸ ಲು ಸೋಷಲಿಸ್ಟರು ಮೈಸೂರಿನಲ್ಲಿ ಸತ್ಯಾಗ್ರಹ ಆರಂಭಿಸಲಿದ್ದರಷ್ಟೆ. ಅಲ್ಲಿಯ ವಾಣಿಜ್ಯವರೇಣ್ಯರು, ಶೆಟ್ಟಿಗಳು, ವ್ಯಾಪಾರಿಗಳು ಎಲ್ಲರೂ ಸೇರಿಕೊಂಡು "ಸತ್ಯಾಗ್ರಹವನ್ನು ಆರಂಭಿಸಿದರಾದರೂ ಆರಂಭಿಸಿ, ನಿಮ್ಮ ಕಾಲು ಮುರಿದುಹಾಕುತ್ತೇವೆ" ಎಂದು ಬೆದರಿಸಿದರಂತೆ.

"ಏನು ಮಾಡೋದು ಈವಾಗ?" ಎಂದು ತಮ್ಮ ನಾಯಕ ಗೋಪಾಲ ಗೌಡರನ್ನ ಮೊರೆಹೊಕ್ಕರು ಈ ವೀರಭಟರು. ಅವರೂ "ಏನು ಮಾಡೋದು? ಎಂಬಂತೆಯೆ ವರ್ತಿಸಿದರಂತೆ.

ತಕ್ಷಣವೇ ಸೋಷಲಿಸ್ಟರ ಚುರುಕು ಬುದ್ಧಿಯಲ್ಲಿ ವಿಚಾರದ ಬೆಳಕೊಂದು ಮಿಂಚಿತು.

"ಏನಾದರೂ ಮಾಡಿ ಪೋಲಿಸರಿಗೆ ನಮ್ಮನ್ನು ಅರೆಸ್ಟ್ ಮಾಡಿ ಎಂದು ಬಿನ್ನಯಿಸಿಕೊಳ್ಳೋಣ"

ಎಲ್ಲರಿಗೂ ಸರಿಯಾದ ಸಲಹೆಯೆನಿಸಿತು.

—ಆದರೆ ಪೋಲೀಸರು "ಅರೆಸ್ಟ್ ಮಾಡಬೇಕೇ ಬೇಡವೆ" ಎಂಬ ಯೋಚನೆಗೆ ಬಿದ್ದರಂತೆ.

—"ದಯವಿಟ್ಟು ಅರೆಸ್ಟು ಮಾಡಿ, ವೀರ ಸೋಷಲಿಸ್ಟರ ಮಾನ ಕಾಪಾಡಿ ಮಾವಂದಿರೆ" ಎಂಬುದೇ ನಮ್ಮದಾದರೂ ಸಲಹೆ!

o o o

ಮಂಗಳೂರಿನ ಆಬಕಾರಿ ಇಲಾಖೆಗೆ ವರ್ಗವಾಗಿ ಬಂದಿರುವ ಹಳೇ ಮೈಸೂರಿನ ಅಧಿಕಾರಿಗಳೊಬ್ಬರು ಯಾವ ಊರುಗಳಿಗೂ ಸಂದರ್ಶನವೀಯದೆ "ಲೈಸೆನ್ಸ್‌ದಾರರ ತಪಾಸಣೆ ಮಾಡಿದ್ದೇನೆ" ಎಂಬುದಾಗಿ ರಿಪೋರ್ಟಿಸಿ ಭತ್ತೆ ಗಿಟ್ಟಿಸುತ್ತಿದ್ದಾರೆಂದೂ, ಹೀಗೆ ಮಾಡುತ್ತಿರುವಾಗ ಸತ್ತುಹೋಗಿರುವ ಲೈಸೆನ್ಸ್‌ದಾರರೊಬ್ಬರನ್ನು ಪರಾಂಬರಿಸಿ ಡೈರಿ ಬರೆದುದು ಪತ್ತೆಯಾಗಿದ್ದು ತನಿಖೆ ನಡೆಯುತ್ತಿದೆಯೆಂದು ಮಂಗಳೂರಿನ ಪತ್ರಿಕೆಯೊಂದರ ವರದಿ

—ಈ ವರದಿ ನಿಜವೇ ಆಗಿದ್ದರೆ, ಇವರು ಎಷ್ಟೆಂದರೂ ಗತ ಮೈಸೂರಿನ ಅಧಿಕಾರಿಗಳು ನೋಡಿ, ಗತಜೀವನದ ಬಗ್ಗೆಯೇ ಇವರು ತಾನೆ ಹೇಳುವುದು?— ತನಿಖೆ ಅನಗತ್ಯ.

o o o

"ರಾಷ್ಟ್ರ ಭದ್ರತೆಯನ್ನು ಕಾಪಾಡುವ ಹೊಣೆಗಾರಿಕೆ ಕಾಂಗ್ರೆಸ್ಸಿನ ಮೇಲಿದೆ. ಆದ್ದರಿಂದ ಕಾಂಗ್ರೆಸ್ಸಿಗರಲ್ಲಿ ಐಕ್ಯಮತ್ಯ ಹಾಗೂ ಭದ್ರತೆ ಇರುವುದು ಅತ್ಯಗತ್ಯವಾಗಿದೆ" ಎಂದು ಕೇಂದ್ರದ ಗೃಹಮಂತ್ರಿ ಗೋವಿಂದವಲ್ಲಭಪಂತ್ ಲಕ್ನೋವಿನಲ್ಲಿ ಹೇಳಿದರಂತೆ.

ಸುತ್ತುಬಳಸಿ ಸಚಿವರು ಮಾತನಾಡಿದ್ದಾರೆ. ಅವರ ಮಾತುಗಳನ್ನು ನೇರಗೊಳಿಸಿದರೆ ಹೀಗಾಗುತ್ತದೆಯಲ್ಲವೆ?

"ಕಾಂಗ್ರೆಸ್ಸಿಗರಲ್ಲಿ ಐಕ್ಯಮತ್ಯ ಹಾಗೂ ಭದ್ರತೆಗಳು ಇಲ್ಲ. ಆದ್ದರಿಂದ ರಾಷ್ಟ್ರ ಭದ್ರತೆಯನ್ನು ಕಾಪಾಡುವ ಹೊಣೆಗಾರಿಕೆ ನಿರ್ವಹಿಸಲು ಅವರಿಂದಾಗದು"

o o o

"ಹೊಲಸು ಇರುವ ತನಕ ಮಾರ್ಷಲ್ ಲಾ ರದ್ದಾಗದು" ಎಂದು ಪಾಕಿಸ್ತಾನದ ಸೈನಿಕಾಡಳಿತದ ಹಿರಿಯ ಅಧಿಕಾರಿ ಜನರಲ್ ಅಯೂಬ್ ಖಾನರ ಘೋಷಣೆ.

"ಮಾರ್ಷಲ್ ಲಾ ಆಡಳಿತ ಹೊಲಸಾಗುವವರೆಗೂ ಅದು ರದ್ದಾಗದು" ಎಂದು ಪಾಕಿಸ್ತಾನದ ಸುಪ್ತ ಜನಶಕ್ತಿಯ ಮರು ಘೋಷಣೆ.

o o o

ತೈವಾನ್ ಮತ್ತುಗಳ ಸಂಬಂಧದಲ್ಲಿ ಅಮೇರಿಕೆಗೆ ಕೆಂಪು ಚೀಣ 33ನೆಯ ತೀವ್ರ ಎಚ್ಚರಿಕೆ ನೀಡುವಂತೆ ವಿದೇಶಾಂಗ ಶಾಖೆಗೆ ಅಧಿಕಾರವಿತ್ತಿರುವದಾಗಿ ವರದಿ.

—ಕೆಂಪು ಚೀಣದ ತಾಳ್ಮೆಗೆ ನಮ್ಮ ಅಭಿನಂದನೆಗಳು.

—ಚೌಚೌವಾಲ

ಒಂದು ಸಣ್ಣ ಸಂಗತಿ

(೩ನೇ ಪುಟದಿಂದ)

"ಇನ್ನೊಂದು 'ರಿಕ್ಷಾ' ನೋಡಿಕೊಳ್ಳಿ" ಎಂದು ಅಧಿಕಾರಿ ಹೇಳಿದ. "ಈ ಮನುಷ್ಯ ಇನ್ನು ಮೇಲೆ ನಿಮ್ಮನ್ನು ಎಳೆಯಲಾರ."

ಸ್ವಾಭಾವಿಕವಾಗಿಯೆ ನನ್ನ ಕೈ ನನ್ನ ಜೇಬಿನೊಳಕ್ಕೆ ಹೋಗಿ ಒಂದು ಹಿಡಿ ಕಾಸುಗಳನ್ನು ಹೊರಕ್ಕೆ ತೆಗೆಯಿತು.

"ಅವನಿಗೆ ಇವನ್ನು ಕೊಡಿ" ಎಂದು ನಾನಂದೆ.

ಗಾಳಿ ತೀರ ನಿಂತಿತ್ತು. ಬೀದಿಯಲ್ಲಿನ್ನೂ ಶಾಂತತೆ ಇತ್ತು. ನಡೆಯುತ್ತಿರುವಾಗ ನನ್ನ ತಲೆಯಲ್ಲಿ ವಿಚಾರ ನಡೆದಿದ್ದರೂ ನನ್ನ ಬಗ್ಗೆ ವಿಚಾರ ಮಾಡಲು ಮಾತ್ರ ನಾನೇ ಹೆದರಿದ್ದೆ. ಆದ ಸಂಗತಿ ಮರೆತು ಹೋಗಲಿ, ಎಂದು ಬಿಟ್ಟರೂ ಆ ಹಿಡಿ ಕಾಸು ಕೊಟ್ಟ ಕಾರಣವನ್ನು ನಾನು ಹುಡುಕಾಡಿದೆ. ಅಹುದು; ಏಕೆ ಕೊಟ್ಟೆ? ಆ 'ರಿಕ್ಷಾ' ಎಳೆಯುವವನ ನಡತೆಯನ್ನು ಕುರಿತು ನಿರ್ಣಯ ಕೊಡಲು ನಾನು ತಕ್ಕವನೆಂದು ನನ್ನ ತಿಳುವಳಿಕೆಯೆ? ನನ್ನ ಮನಸ್ಸಾಕ್ಷಿಯಿದಿರು ನನಗೆಯೇ ಉತ್ತರವಿಲ್ಲದಾಯಿತು.

ಇಂದಿಗೀಗಲೂ ಆ ಅನುಭವದ ಕಿಡಿಯು ನನ್ನ ನೆನಪಿನಲ್ಲಿ ಹೊತ್ತುತ್ತಿದೆ. ಎಷ್ಟೋ ಹವಣಿಸಿ ಎಷ್ಟೋ ಕಷ್ಟದಿಂದ ಅದನ್ನು ಕುರಿತು ನಾನು ಒಳಗೊಳಗೆ ವಿಚಾರ ಮಾಡುವೆ. ಈ ಕೆಲ ವರ್ಷಗಳ ರಾಜಕೀಯ ಮತ್ತು ಸಾಂಗ್ರಾಮಿಕ ನಾಟಕವು ನಾನು ಚಿಕ್ಕಂದಿನಲ್ಲೋದಿದ ಪ್ರೌಢ ಗ್ರಂಥಗಳಂತೆಯೆ ನೆನಪಿನಲ್ಲುಳಿದಿದೆ. ಆದರ ಒಂದು ಸಾಲೂ ನನ್ನ ತಲೆಯಲ್ಲಿ ಬರದು. ಆದರೆ ಈ ಸಂಗತಿಯು ಯಾವಾಗಲೂ ಕಣ್ಣಿದಿರು ಕಟ್ಟಿ ನನಗೆ ಛೀ ಹಾಕಿ ಶುದ್ಧ ಮಾಡಿ ಆತ್ಮಶುದ್ಧಿಗೆ ನನ್ನನ್ನು ಪ್ರೇರಿಸಿ, ನನ್ನ ಆಶೆ ಸಾಹಸಗಳಿಗೆ ಬಲವನ್ನಿತ್ತು ತನ್ನ ನಾಟ್ಯವನ್ನಾಡುತ್ತಿದೆ. ಅದು ನಡೆದ ದಿನದಂತೆಯೇ ಚಾ-ಚೂ ಬಿಡದೆ ವಿವರ ವಿವರವಾಗಿ ನಾನದನ್ನು ಸ್ಪಷ್ಟವಾಗಿ ಕಾಣುತ್ತಿದ್ದೇನೆ.

["ಚೀನದ ಬಾಳು ಬದುಕು" ಸಂಗ್ರಹದ ಕೃಪೆದಿಂದ]

ನೀವೇನು ಹೇಳುತ್ತೀರಿ ?

(೩ನೇ ಪುಟದಿಂದ)

ಒಂದು ಪತ್ರಿಕೆಯಲ್ಲಿ ಒಂದೇ ಒಂದು ಸಲ ಜಾಹೀರಾತಿಗಾಗಿ ಇವರು ತೆರುತ್ತಿರುವ ಹಣದಷ್ಟು ಸಂಬಳವನ್ನು ಒಬ್ಬ ಕಾರ್ಮಿಕನಿಗೆ ಒಂದು ತಿಂಗಳಿಗೆ ಕೊಡುತ್ತಿರುವರೋ ಇಲ್ಲವೊ ಎಂಬುದು ಸಂದೇಹ.

ಉದ್ಯಮದ ರಕ್ಷಕರೆಂದು ದುಡ್ಡು ಕೊಟ್ಟು ಜಾಹೀರಾತು ಮಾಡಿಕೊಳ್ಳುವ ಈ ಜನರು ಏನು ತಾನೆ ಮಾಡಲಾರರು ?

ಎಂಥ ಭೀಕರ ಶೋಷಣೆ ?

ಮಧ್ಯಪ್ರಾಚ್ಯವು ಪ್ರಪಂಚದ ತೈಲೋದ್ಯಮದಲ್ಲೇ ಅತ್ಯಂತ ಲಾಭದಾಯಕವಾದ ಪ್ರದೇಶ. ಒಂದು ಬ್ಯಾರಿಲ್ ಎಣ್ಣೆಯ ಸರ್ವೇಸಾಮಾನ್ಯ ಬೆಲೆ 10 ಸೆಂಟ್ಸ್ (ಅಮೇರಿಕೆಯ ನಾಣ್ಯ) ಆಗುತ್ತೆ. ಮೆಕ್ಸಿಕೋವಿನಲ್ಲಿ ಒಂದು ಬ್ಯಾರಿಲ್ ಎಣ್ಣೆಯ ಬೆಲೆ 75 ಸೆಂಟ್ಸ್ ಆಗುತ್ತದೆ.

ಅಮೇರಿಕೆಯು 1955ನೆಯ ಸಾಲಿಗೆ 1,200 ಮಿಲಿಯನ್ ಡಾಲರ್ ಸಂಪಾದಿಸಿದೆ. ಅಂದರೆ ಅದರ ಒಟ್ಟು ಹೊರದೇಶಗಳ ಸಂಪಾದನೆಯಲ್ಲಿ ಶೇ. 40ರಷ್ಟು ಮಧ್ಯಪ್ರಾಚ್ಯದಲ್ಲೇ ಬಂದಿವೆ.

ಅಲ್ಲದೆ ಇದೇ ವರುಷದಲ್ಲಿ ಇದೇ ಪ್ರದೇಶದಲ್ಲಿ ಬ್ರಿಟಾನಿನ 18 ತೈಲ ಕಂಪೆನಿಗಳು 367 ಮಿಲಿಯನ್ ಪೌಂಡುಗಳನ್ನು ಸಂಪಾದಿಸಿವೆ.

ಬೇರೆ ಬೇರೆ ಅರಬ್ ರಾಷ್ಟ್ರಗಳಿಂದ ಸಂಪಾದಿಸಿದ ಒಟ್ಟು ಲಾಭದ ಸಂಖ್ಯೆ ಹೀಗಿದೆ :

ಕುವೈಟ್	= 280	ಮಿ. ಪೌಂ.
ಸೌದಿಅರಬೀಯಾ	= 275	,,
ಇರಾಕ್	= 200	,,
ಇರಾಣ್	= 100	,,
ಕಾಟಾರ್	= 40	,,
ಬಹ್ರೇನ್	= 20	,,

ಈ ಅತ್ಯದ್ಭುತ ಲಾಭವನ್ನು ಗಳಿಸಲು ಸಾಮ್ರಾಜ್ಯಶಾಹಿ ರಾಷ್ಟ್ರಗಳು ಅರಬ್ ರಾಷ್ಟ್ರಗಳ ಕೋಟ್ಯಾಂತರ ಜನತೆಯನ್ನು ದಟ್ಟ ದಾರಿದ್ರ್ಯಕ್ಕೆ ಬಲಿಗೊಟ್ಟಿವೆ.

ಅರಬ್ ಕಾರ್ಮಿಕನ ಕೂಲಿ ಯೂರೋಪಿಯನ್ ದೇಶಗಳಲ್ಲಿರುವ ಕಾರ್ಮಿಕನ 1/7 ರಷ್ಟಿದ್ದರೆ ಅಮೇರಿಕನ್ ಕಾರ್ಮಿಕನ ಸಂಬಳದೊಂದಿಗೆ ತುಲನೆ ಮಾಡಿದರೆ ಇದಕ್ಕಿಂತಲೂ ಇನ್ನೂ ಕಡಮೆಯಾಗುತ್ತದೆ. ಅರಬ್ ಕಾರ್ಮಿಕರ ಶೋಷಣೆಯಲ್ಲಿ ಪಶುತ್ವವನ್ನೂ ನಾಚಿಕೆಗೀಡು ಮಾಡುವ ಬ್ರಿಟಿಷ್ ಅಮೇರಿಕಾ ಬಂಡವಾಳಗಾರರ ನೀತಿಗೆ ಇದೊಂದೇ ಸಾಕಷ್ಟು ಒಳ್ಳೆಯ ನಿದರ್ಶನವಾಗಿದೆ.

ಅರಬ್ ರಾಷ್ಟ್ರಗಳ ಕಾರ್ಮಿಕರಲ್ಲಿ ಒಂದು ಪ್ರಸಿದ್ಧವಾದ ಗಾದೆ ಮಾತಿದೆ:

"ಮಣ್ಣಿನಿಂದ ನಾವು ಎಣ್ಣೆಯನ್ನು ತೆಗೆಯುತ್ತೇವೆ ಮತ್ತು ಬ್ರಿಟಿಷರೂ ಅಮೇರಿಕೆಯವರೂ ನಮ್ಮಿಂದ ನೆತ್ತರನ್ನು ಹೀರುತ್ತಾರೆ."

o o o o

ಏನು ಹೇಳುತ್ತೀರಿ ?

—ಪ್ರಶ್ನಾರ್ಥಿ

ಬೆಂಗಳೂರು—

ಬಿ. ಡಿ. ಎಂ. ವರ್ಕರ್ಸ್ ಯೂನಿಯನ್ನಿನ ವಿಶೇಷ ಸರ್ವಸದಸ್ಯರ ಸಭೆ

ಬೆಂಗಳೂರು ಡ್ರೆಸ್ಸ್ ಮ್ಯಾನ್ಯುಫ್ಯಾಕ್ಚರಿಂಗ್ ವರ್ಕರ್ಸ್ ಯೂನಿಯನ್ನಿನ ವಿಶೇಷ ಸದಸ್ಯರ ಸಭೆಯು ತಾ. 9-10-58 ರಂದು ಸಂಜೆ 6ಕ್ಕೆ ಸಂಘದ ಆಫೀಸಿನಲ್ಲಿ ಶ್ರೀ ಎಂ. ಪಿ. ಮುತ್ತುರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯು ಶ್ರೀ ರಾಮಚಂದ್ರನ್‌ರವರ ರಾಜಿನಾಮೆಯನ್ನು ಅಂಗೀಕರಿಸಿತು ಮತ್ತು ಶ್ರೀ ಎಸ್. ಜಿ. ಜಯರಾಂರವರನ್ನು ಗೌರವ ಸದಸ್ಯರಾಗಿ ಚುನಾಯಿಸಿತು. ಸಂಘದ ಅಧ್ಯಕ್ಷರ ಸ್ಥಾನಕ್ಕೆ ಅವರನ್ನೇ ಸರ್ವಾನುಮತದಿಂದ ಚುನಾಯಿಸಲಾಯಿತು. ಸಭೆಯಲ್ಲಿ ಐ. ಮರಿದಾಸ್, ಎಸ್. ಜಿ. ಜಯರಾಂ ಮತ್ತು ಅನೇಕ ಕಾರ್ಮಿಕ ಮುಖಂಡರು ಭಾಷಣ ಮಾಡಿ ಮಾಲೀಕರ ದಬ್ಬಾಳಿಕೆಯನ್ನು ಎದುರಿಸಲು ಕಾರ್ಮಿಕರು ಒಂದಾಗಿ ಹೋರಾಡಬೇಕೆಂದು ಕರೆಯಿತ್ತರು.

ಜಿಲ್ಲಾ ಹೋಟೇಲ ಮತ್ತು ಕ್ಯಾಂಟೀನ್ ಕೆಲಸಗಾರರ ಸಂಘದ ಸರ್ವಸದಸ್ಯರ ಸಭೆ

ತಾ. 9-10-58ರಂದು ಬೆಂಗಳೂರು ಜಿಲ್ಲಾ ಹೋಟೆಲ್ ಮತ್ತು ಕ್ಯಾಂಟೀನ್ ಕೆಲಸಗಾರರ ಸಂಘದ ಸರ್ವಸದಸ್ಯರ ಸಭೆಯು ಬೆಂಗಳೂರಿನಲ್ಲಿಸೇರಿ ಕೆಳಕಂಡ ತೀರ್ಮಾನಗಳನ್ನು ಸರ್ವಾನುಮತದಿಂದ ಸ್ವೀಕರಿಸಿತು. ಕಾಂ|| ಐ. ಮರಿದಾಸ್ ಅವರು ಅಧ್ಯಕ್ಷತೆ ವಹಿಸಿದ್ದರು.

1) ಮದರಾಸಿನಲ್ಲಿ ಹೋಟೆಲ್ ಕೆಲಸಗಾರರ ಹಿತಸಂಬಂಧಗಳ ಬಗ್ಗೆ ಮಾಡಿರುವ ಕಾನೂನಿನಂಥ ಕಾನೂನನ್ನು ಮೈಸೂರು ಸರ್ಕಾರವೂ ಮಾಡಬೇಕು.

2) ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಮುಷ್ಕರದ ಹೋರಾಟಕ್ಕೆ ಬೆಂಬಲ ನೀಡುತ್ತದೆ ಮತ್ತು ಸರ್ಕಾರವು ತೀವ್ರವಾಗಿ ಈ ವಿಷಯದಲ್ಲಿ ಪ್ರವೇಶಿಸಿ ಕ್ರಮ ಕೈಗೊಳ್ಳಬೇಕೆಂದು ಬಲವಂತಪಡಿಸುತ್ತದೆ

3) ಕೃಷ್ಣ ಮತ್ತು ಚಂದ್ರ ಮಿಲ್ಲುಗಳ ಮಾಲೀಕರು ಮಿಲ್ಲುಗಳನ್ನು ಮುಚ್ಚಿ ಸಹಸ್ರಾರು ಕಾರ್ಮಿಕರಿಗೆ ಉಪವಾಸ ವನವಾಸ ನೀಡಿರುವ ನೀತಿಯನ್ನು ತೀವ್ರವಾಗಿ ಖಂಡಿಸುತ್ತದೆ. ಸರ್ಕಾರವು ಇದನ್ನು ನಿವಾರಿಸುವ ಬದಲು ವಿಳಂಬ ನೀತಿಯನ್ನನುಸರಿಸುತ್ತಿರುದವುನ್ನು ಕಟುವಾಗಿ ಖಂಡಿಸುತ್ತದೆ. ತಕ್ಷಣವೇ ಇದನ್ನು ಇತ್ಯರ್ಥ ಮಾಡಬೇಕೆಂದು ಒತ್ತಾಯ ಪೂರ್ವಕ ಕೇಳಿಕೊಳ್ಳುತ್ತವೆ.

ರಾಯಬಾಗ ಮಹಲಿನಲ್ಲಿ ಹಿಂದುಳಿದವರಿಗೆ

ಕುಡಿಯಲು ನೀರಿಲ್ಲ, ಉಳಲು ಭೂಮಿಯಿದ್ದೂ ದಕ್ಕುತ್ತಿಲ್ಲ

ರಾಯಬಾಗ್ ಮಹಲು ಬೆಳಗಾವಿ ಜಿಲ್ಲೆಯ ಉತ್ತರ ಭಾಗದಲ್ಲಿರುವುದು ಅಂದರೆ ನೂತನ ಮೈಸೂರಿನ ಉತ್ತರ ತುದಿಯೇ ಸರಿ. ಬೊಂಬಾಯಿ ರಾಜ್ಯದಲ್ಲಿದ್ದಾಗ ಕಡೆಗಣಿಸಲ್ಪಟ್ಟದ್ದ (ಇದು ಕೊಲ್ಲಾಪುರ ರಾಜರಿಗೆ ಬೇರೆ ಸೇರಿತ್ತು!) ಈ ಭಾಗಗಳು ನಮ್ಮದೇ ಆದ ಮೈಸೂರು ರಾಜ್ಯ ಬಂದಾಗಲೂ ಅದೇ ಸ್ಥಿತಿಯಲ್ಲಿರುವುದು ಶುದ್ಧ ನಾಚಿಕೆಗೇಡಾದ ವಿಷಯವಾಗಿದೆ. ರಾಯಬಾಗ ಮಹಲಿನಲ್ಲಿರುವ ಹಿಂದುಳಿದ ವರ್ಗದವರ ಸ್ಥಿತಿಯಂತೂ ತುಂಬಾ ಚಿಂತಾಜನಕವಾಗಿದೆ. ಅವರಿಗೆ ಅಲ್ಪದರಲ್ಲೇ ಒಂದಿಷ್ಟು ಸೌಕರ್ಯಗಳನ್ನು ಸರ್ಕಾರ ಮನಸ್ಸು ಮಾಡಿದರೆ ಒದಗಿಸಬಹುದು. ಅನ್ಯಾಯಗಳನ್ನು ನಿವಾರಿಸಬಹುದು. ಅದೇನು ದೊಡ್ಡ ಮಾತಲ್ಲ. ಹಿಂದುಳಿದವರಿಗಾಗುತ್ತಿರುವ ಅನ್ಯಾಯಗಳಾದರೂ ಏನು?

ಚಿಂಚಲಿ ಗ್ರಾಮದಲ್ಲಿ ಕೊರವರ ಜಾತಿಯ 30 ಕುಟುಂಬದ ಜನರಿಗೆ ಊರಿನ ಬಾವಿಯಲ್ಲಿ ನೀರು ತುಂಬಲು ಪ್ರವೇಶವಿಲ್ಲ. ಆದಕ್ಕಾಗಿ ರಾಜ್ಯ ಮಟ್ಟದ ವರೆಗೂ ಪ್ರಯತ್ನ ಮಾಡಲಾಯಿತು. ಆದರೆ ಏನೇನೂ ಉಪಯೋಗವಾಗಲಿಲ್ಲ.

ರಾಯಬಾಗದ 10 ಸಾವಿರ ಎಕ್ರೆ ಪಡ ಭೂಮಿಯನ್ನು ದಲಿತ, ಭೂ-ಹೀನ ಹಾಗೂ ವಿಮುಕ್ತ ಜಾತಿಯವರು ಬೇಸಾಯ ಸಂಘದಿಂದ ಪಡೆಯಲು ಶೇರ್ ಹಣವನ್ನು ಬ್ಯಾಂಕಿನಲ್ಲಿಟ್ಟಿರುವರು. ಆದರೆ ಈಗ ಜನರಿಗೆ ತಿಳುಹಿಸದೆ ಫಾರೆಸ್ಟ್ ಮಾಡುವ ಸುದ್ದಿ ಹಬ್ಬಿದೆ. ಇದು ಮೊದಲು ಫಾರೆಸ್ಟ್ ಆಗಿದ್ದು ಕಂದಾಯ ಖಾತೆಗೆ ಸೇರಿಸಲ್ಪಟ್ಟಿದೆ. ಈಗ ಮತ್ತೆ ಫಾರೆಸ್ಟ್ ಯೋಜನೆ ಅಂದರೆ ಕೊಲ್ಹಾಪುರ ಮಹಾರಾಜರಿಗೆ ಆಶ್ರಯ ಕೊಡುವ ಉದ್ದೇಶವೆಂದೇ ಅರ್ಥವಾಗುತ್ತದೆ.

ರಾಯಬಾಗದ ವಿಮುಕ್ತ ಜಾತಿಯ ಬೇಸಾಯ ಸಂಘಕ್ಕೆ ೪ ವರ್ಷಗಳ ಲಾಗಾಯ್ತು ರೂ. ೯,೦೦೦ಗಳ ಸಾಲ ಮಂಜೂರಿಯಾಗಿದ್ದು, ಅವು ಬ್ಯಾಂಕಿನಲ್ಲೇ ಇದ್ದುವು. ಬಡ ಜನರು ಪುಕ್ಕಟೆ ಬಡ್ಡಿಯನ್ನು ತುಂಬುತ್ತಿರುವರು.

ಸದ್ಯಕ್ಕೆ ಬೆಳಗಾಂವ ಜಿಲ್ಲೆಗೆ ಹಾಗೂ ರಾಜ್ಯ ಸರಕಾರದ ಸಮಾಜ ಕಲ್ಯಾಣ ಅಧಿಕಾರಿಗಳ ಕಡೆಗೇ ವಿಮುಕ್ತ ಹಾಗೂ ಸಂಚಾರಿ ಜನರಿಗೆ ಸಹಾಯ ಸವಲತ್ತುಗಳನ್ನು ನೀಡುವ ಯೋಜನೆ ಇದೆ. ರಾಯಬಾಗದ ಹರಣ ಶಿಕಾರಿ, ಹಾಗೂ ಘಂಟಿಚೋರ ಜನರು ಈ ಬಗ್ಗೆ ಎಷ್ಟು ಅರ್ಜಿಗಳನ್ನು ಬರೆದುಕೊಂಡರೂ ಯೋಗ್ಯ ಸವಲತ್ತುಗಳಿರಲಿ, ಅರ್ಜಿಗಳಿಗೆ ದಾದು-ಫಿರ್ಯಾದು ಕೂಡ ಇಲ್ಲ.

ರಾಜ್ಯದ ಮಂತ್ರಿಗಳು ರಾಯಬಾಗ ವಿಮುಕ್ತ ಬೇಸಾಯ ಸಂಘಕ್ಕೆ ಒಮ್ಮೆಯಾದರೂ ಭೆಟ್ಟಿಯನ್ನು ಕೊಟ್ಟಿರುವದಿಲ್ಲ ಹಿಂದುಳಿದವರ ಅಭಿವೃದ್ಧಿ ಕೇವಲ ಕಾಗದದಲ್ಲಿ ಅಂತ ತಿಳಿಯುವ ಕಾಲ ಬಂದಿರುವದು.

ರಾ. ಕೃ. ಸಿತೋಳೆ

ಸಂಸ್ಥಾನದ ಪ್ಲಾಂಟೇಷನ್ನುಗಳಲ್ಲಿ ಅಭದ್ರ ಪರಿಸ್ಥಿತಿ

ಸಂಸ್ಥಾನದ ಪ್ಲಾಂಟೇಶನುಗಳಲ್ಲಿ ದುಡಿಯುವ ಕಾರ್ಮಿಕರ ಮೇಲೆ ಅಮಾನುಷ ದಬ್ಬಾಳಿಕೆ ನಡೆಯುತ್ತಿದೆ. ಈ ಬಗ್ಗೆ ಕಾರ್ಮಿಕರು ಪ್ರತ್ಯೇಕ ಪ್ರತ್ಯೇಕವಾಗಿಯೂ ತಮ್ಮ ಸಂಘಟನೆಗಳ ಮೂಲಕವಾಗಿಯೂ ಸ್ಥಳೀಯ ಪೋಲೀಸರಿಂದ ಹಿಡಿದು ಸಂಸ್ಥಾನದ ಉನ್ನತ ಅಧಿಕಾರಿಗಳವರೆಗೂ ಮತ್ತು ಗೃಹಖಾತೆಯ ಮಂತ್ರಿಯವರಿಗೂ ದೂರುಗಳನ್ನೂ ಮನವಿಗಳನ್ನೂ ಕಳುಹಿಸುತ್ತಿದ್ದಾರೆ. ಆದರೆ ಪ್ರಯೋಜನ ಮಾತ್ರ ಸೊನ್ನೆ.

ಕಾರ್ಮಿಕರು ತಮ್ಮ ಹಕ್ಕುಗಳನ್ನು ಕಾಪಾಡಲು ಸಂಘಟಿತರಾಗುತ್ತಿರುವುದನ್ನು ಸಹಿಸಲಾರದೆ ಕಾರ್ಮಿಕರ ಮೇಲೆ ನೇರ ಆಕ್ರಮಣವೇ ನಡೆಯುತ್ತಿದೆ. ಕಾರ್ಮಿಕರ ಮನೆ ನುಗ್ಗಿ ಹೆಂಗಸರು ಮಕ್ಕಳೆನ್ನದೆ ಥಳಿಸುವುದು, ಮನೆ ಬಾಗಿಲುಗಳನ್ನು ಮುರಿದು ರಾತ್ರಿ ಕಾಲದಲ್ಲಿ ಕಾರ್ಮಿಕರ ಮನೆ ನುಗ್ಗುವುದು, ನಡೆದಿದ್ದು ಈ ಸಂದರ್ಭದಲ್ಲಿ ಕುಡುಗೋಲು ಬಂದೂಕುಗಳನ್ನೂ ಆಕ್ರಮಣಗಾರರು ಬಳಸುತ್ತಾರೆ. ಕಾರ್ಮಿಕರ ವಿವಾದವು ಇತ್ಯರ್ಥವಾಗದೆ ಲೇಬರ್ ಖಾತೆಯ ಮುಂದಿರುವಾಗ ಬಲಾತ್ಕಾರವಾಗಿ ಮನೆಯನ್ನು ಖಾಲಿ ಮಾಡುವುದು ಇತ್ಯಾದಿ ಇವುಗಳೆಲ್ಲವನ್ನೂ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೂ ಕಾರ್ಮಿಕರಿಗೆ ಯಾವ ರಕ್ಷಣೆಯನ್ನೂ ನೀಡುತ್ತಿಲ್ಲ, ಬದಲಾಗಿ ಆಕ್ರಮಣಗಾರರ ವಿರುದ್ಧ ಯಾವ ಕ್ರಮವನ್ನೂ ಕೈಗೊಳ್ಳದೇ ಇರುವುದರಿಂದ ಆಕ್ರಮಣಗಾರರಿಗೆ ಪ್ರೋತ್ಸಾಹ ಕೊಟ್ಟಂತಾಗಿದೆ.

ದಬ್ಬಾಳಿಕೆಯು ಮಾಲಿಕರ-ಗೂಂಡಾಗಳಿಂದ ನಡೆಯುವುದಲ್ಲದೆ, ಕೆಲವೊಂದು ಸಲ ಪೋಲೀಸರ ಮೂಲಕವು ನಡೆಯುವುದು. ಕೈಗಾರಿಕೆಯಲ್ಲಿ ಶಾಂತಿಯನ್ನು ಕಾಪಾಡಬೇಕೆಂದು, ಧೇಬರ್‌ಜೀಯವರಂಥ ಮುಂದಾಳುಗಳು ಮಾಡುವ ಭಾಷಣಗಳೂ ಪತ್ರಿಕೆಗಳಲ್ಲಿ ಕೊಡುವ ಹೇಳಿಕೆಗಳೂ ಸ್ವಾಗತಾರ್ಹ. ಈ ದೃಷ್ಟಿಯನ್ನಿ

ಕಾಂಗ್ರೆಸ್ ನಾಯಕರು ಬಾಯಿ ಬಿಡುವರೆ ?

ಟ್ಟುಕೊಂಡೇ ಅವರು ಕೇರಳದಲ್ಲಿ ಪ್ರವಾಸ ಮಾಡಿರಬೇಕು. ಅಂದಮೇಲೆ ತನ್ನ ಪಕ್ಷ ಅಧಿಕಾರದಲ್ಲಿರುವ ಮೈಸೂರಿನ ಪ್ಲಾಂಟೇಶನುಗಳಲ್ಲೂ ತಮ್ಮ ಪ್ರವಾಸವನ್ನು ಕೈಗೊಂಡು ಕಾರ್ಮಿಕರಿಗೆ ಭದ್ರತೆಯನ್ನು ಕಲ್ಪಿಸಿ ಕೊಡಲು, ತಮ್ಮ ಬಳಗದವರಿಗೆ ಹಾಗೂ ತಮ್ಮ ಪಕ್ಷದ ಸರಕಾರಕ್ಕೆ ನಿರ್ದೇಶನವನ್ನೀಯುವುದಲ್ಲದೆ ನಿಷ್ಪಕ್ಷಪಾತ ವಿಚಾರಣೆಯನ್ನು ನಡೆಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವರೆಂದು ನಾವು ಆಶಿಸಬಹುದೇ? ಯಾಕೆಂದರೆ, ಮೈಸೂರಿನ ಮಂತ್ರಿಗಳ ಬಂಧುಗಳಿಗೂ ಉನ್ನತ ಪೋಲೀಸ್ ಅಧಿಕಾರಿಗಳ ಬಂಧುಬಳಗದವರಿಗೂ ನಮ್ಮ ಸಂಸ್ಥಾನದಲ್ಲಿ ಎಸ್ಟೇಟುಗಳಿವೆಯೆಂಬುದನ್ನು ಗಮನಿಸಬೇಕು.

ಸರಕಾರದ ಪಕ್ಷಪಾತತನದ ನೀತಿಯಿಂದಾಗಿ ಪ್ಲಾಂಟೇಶನ್ ಕಾರ್ಮಿಕರಿಗೆ ದುಡಿದು ಜೀವಿಸುವುದೇ ಕಷ್ಟವಾಗಿದೆ.

ಈ ನೀತಿಯನ್ನು ಬದಲಿಸಲು ಪ್ಲಾಂಟೇಶನ್ ಕಾರ್ಮಿಕರು ಐಕ್ಯದಿಂದ ತಮ್ಮ ಹಕ್ಕುಗಳನ್ನು ಸ್ಥಾಪಿಸಲು ಅಣಿಯಾಗಬೇಕಾಗಿದೆ. ಅಲ್ಲದೆ ತಮ್ಮ ಮೇಲಾಗುವ ಆಕ್ರಮಣ ದಬ್ಬಾಳಿಕೆಯನ್ನು ತಡೆಯಲು ಮುಂಬರಬೇಕಾದ ಕಾಲ ಸನ್ನಿಹಿತವಾಗಿದೆ.

—ಎಂ. ವಿ. ಭಾಸ್ಕರ್

ಇಂಟಕ್ ದ್ರೋಹ ಬಗೆದರೂ

ಕೆಂಬಾವುಟ ಕಾರ್ಮಿಕರ ಪ್ರಚಂಡ ವಿಜಯ

ಟೀ ಎಸ್ಟೇಟ್ಸ್ ಇಂಡಿಯ ಪ್ರೈವೆಟ್ ಲಿಮಿಟೆಡ್ (ಬ್ರೂಕ್ ಬಾಂಡ್) ಸಂಸ್ಥೆಯ ಕೆಳಗಿರುವ ಕಾಡುಮನೆ ಟೀ ಎಸ್ಟೇಟಿನಲ್ಲಿ ಕಾರ್ಮಿಕರು ಕೆಂಬಾವುಟದಡಿಯಲ್ಲಿ ಸಂಘಟಿತರಾಗಲು ತೊಡಗಿದ್ದರಿಂದ, ಕಂಪನಿಯು ಪ್ರತೀಕಾರವಾಗಿ ಇಬ್ಬರು ಕಾರ್ಮಿಕರನ್ನು (ಆರ್. ಕೃಷ್ಣ ಮತ್ತು ಮಡಿಯನ್ನು) 1956 ಫೆಬ್ರವರಿಯಲ್ಲಿ ಕೆಲಸದಿಂದ ವಜಾ ಮಾಡಿತು. ಕಂಪನಿಯ ಕ್ರಮಕ್ಕೆ ಅನುಕೂಲವಾಗಿ ಐ.ಎನ್.ಟಿ.ಯು.ಸಿ.ಯು. ಸಂಘಟನೆಯು ತನ್ನ ಕೈಲಾದದ್ದನ್ನೆಲ್ಲಾ ಮಾಡಿತು. ಆದರೆ, ಕೆಂಬಾವುಟದಡಿಯಲ್ಲಿ ಸಂಘಟಿತರಾದ ಕಾರ್ಮಿಕರ ನಿರಂತರ ಪರಿಶ್ರಮದ ಫಲವಾಗಿ, ಕಂಪನಿಯ — ಏಜಂಟರ ಕ್ರಮವನ್ನು ಸೋಲಿಸಲು ಸಾಧ್ಯವಾಯಿತು.

ಇದೀಗ ಬೆಂಗಳೂರಿನ ಲೇಬರ್ ಕೋರ್ಟ್, ಸದ್ರಿ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದ್ದು ಅನ್ಯಾಯವೆಂದೂ, ಆದುದರಿಂದ ಅವರಿಗೆ ಮತ್ತೆ ಕೆಲಸವನ್ನು ಕೊಡುವುದಲ್ಲದೆ ಪರಿಹಾರವನ್ನೂ ಕೊಟ್ಟು ಸರ್ವಿಸ್ಸೂ ಕೊಡಬೇಕೆಂದೂ ತೀರ್ಪಿತ್ತಿದೆ. ಈ ತೀರ್ಪಿನಿಂದಾಗಿ ಮೈಸೂರು ಸಂಸ್ಥಾನದಲ್ಲಿ ಐ.ಎನ್.ಟಿ.ಯು.ಸಿ.ಯು. ಯವರು ಮಾಲಿಕರ ಪರವಾಗಿ ನಿಂತು, ಕಾರ್ಮಿಕರಿಗೆ ದ್ರೋಹ ಬಗೆಯುತ್ತಿದ್ದಾರೆಂಬುದಕ್ಕೆ ಇನ್ನೊಂದು ನಿದರ್ಶನ ದೊರೆಯಿತು.

ದೊಡ್ಡಬಳ್ಳಾಪುರ

ಅಧಿಕಾರಿಗಳೆಲ್ಲ ಹೀಗಿದ್ದರೆ ಎಷ್ಟು ಒಳ್ಳೆಯದು!

ಈ ತಾಲ್ಲೂಕಿನಲ್ಲಿ ಇತ್ತೀಚೆಗೆ ವಿಪರೀತ ಮಳೆಯಿಂದ ಕೆರೆಗಳು ಕೋಡಿ ಬಿದ್ದು ಕೆಲವು ಬಹು ಅಪಾಯ ಸ್ಥಿತಿಯಲ್ಲಿದ್ದವು. ಸ್ಥಳೀಯ ಅಧಿಕಾರಿಗಳು ಮುಂಜಾಗ್ರತೆಯಿಂದ ಅನೇಕ ಕೆರೆಗಳನ್ನು ಉಳಿಸಿದರು. ತಾ|| 7—10—58 ರಂದು ಬೆಳವಂಗಲದ ಹೋಬಳಿ ಚಿಕ್ಕ ಹೆಜ್ಜಾಜಿಯ ಕೆರೆಯಲ್ಲಿ ಸಂಜೆ 4 ಘಂಟೆಯಲ್ಲಿ ವಿಪರೀತ ನೀರಿನಿಂದ ಕೆರೆ ಒಡಿಯುವ ಸುದ್ದಿ ಬಂದ ಒಡನೆಯೇ ತಹಸೀಲ್ದಾರ್ ಶ್ರೀ ಕೆ. ಸಿದ್ದಗಂಗಯ್ಯನವರು ಮತ್ತು ಅಸಿಸ್ಟೆಂಟ್ ಇಂಜನಿಯರ್ ಸಹ ಹೋಗಿ ಕೆರೆ ಕೋಡಿ ತಗ್ಗಿಸಿದುದಲ್ಲದೆ ವಿಪರೀತವಾಗಿ ಹರಿಯುತ್ತಿದ್ದ ನೀರಿನಲ್ಲೇ ತಹಶೀಲ್ದಾರ್‌ರವರು ರೈತರೊಡನೆ ಕೆರೆಯ ಏರಿಯ ಮೇಲೆ ಹೋಗಿ ಅಪಾಯದಲ್ಲಿದ್ದ ಕಟ್ಟೆಯನ್ನು ಒಡೆಯದಂತೆ ರಕ್ಷಿಸಿದರು. ಕಾಲವು ಬಹಳ ಕತ್ತಲಿನಿಂದ ಕೂಡಿದ್ದು ಮಧ್ಯ ರಾತ್ರಿಯಲ್ಲೂ ಸಹ ಅಧಿಕಾರಿಗಳು ಧೈರ್ಯದಿಂದ ಕೆಲಸ ಮಾಡಿ ಒಂದು ಭಾರೀ ಕೆರೆಯನ್ನು ಉಳಿಸಿ ರೈತರಿಗೆ ಮಹೋಪಕಾರ ಮಾಡಿರುವುದು ತುಂಬಾ ಶ್ಲಾಘನೀಯವಾಗಿದೆ. ಇಂತಹ ಜನಾನುರಾಗೀ ತಹಶೀಲ್ದಾರ್ ಸಿದ್ದಗಂಗಯ್ಯನವರ ಸಹಾಯಕ್ಕೆ ಅಕ್ಕಪಕ್ಕದ ಗ್ರಾಮಗಳ 300-400 ರೈತರು ಬಂದು ಇಡೀ ರಾತ್ರಿ ಕೆಲಸ ಮಾಡಿ ಏರಿ ಒಡೆಯದಂತೆ ಮರಳು ಮಣ್ಣು ಹುಲ್ಲುಗುಪ್ಪೆ ಹಾಕಿ ಬೆಳೆಯನ್ನು ಉಳಿಸಿದರು, ಆ ಒಂದು ರಾತ್ರಿ ಅಧಿಕಾರಿಗಳು ಉದಾಸೀನತೆಯಿಂದ ಇದ್ದಿದ್ದರೆ ಭಾರಿ ಅಪಾಯ, ನಷ್ಟವುಂಟಾಗುತ್ತಿತ್ತು.

ಕನಿಷ್ಠ ಕೂಲಿ ನಿರ್ಣಯದ ಸಮಿತಿ ಎಲ್ಲಿ ?

ಮೈಸೂರು ಕಾರ್ಮಿಕ ಸಚಿವರ ಅಜ್ಞಾನ ಪ್ರದರ್ಶನ

ಕಳೆದ ತಾ॥ 10 ರಂದು ಮೈಸೂರಿನ ಮಜೂರ ಮಂತ್ರಿ ಶ್ರೀ ಟಿ. ಸುಬ್ರಹ್ಮಣ್ಯಂ ಇವರು ದೈನಿಕ ಪತ್ರಿಕೆಯೊಂದರ ಪ್ರತಿನಿಧಿಯ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ "ಪ್ರಾಂತದ ಬೀಡಿ ಮಜೂರರ ಕನಿಷ್ಠ ವೇತನದ ಬಗ್ಗೆ ಈಗಾಗಲೇ ಒಂದು ಶಾಸನ ಜ್ಯಾರಿಯಲ್ಲಿದೆ. ಆದರೆ ಅದು ಪೂರ್ಣ ಕಾರ್ಯಗತಗೊಂಡಿಲ್ಲ. ಕಾರಣ ಕೆಲವರು ಮನೆಯಲ್ಲಿಯೇ ಕೆಲ ಬೀಡಿ ಮಜೂರರನ್ನು ನೇಮಿಸಿ ಇದು ಫ್ಯಾಕ್ಟರಿ ಅಲ್ಲವೆಂದು ಹೇಳಿ ಕನಿಷ್ಠ ವೇತನವನ್ನು ಕಾರ್ಯಗತಗೊಳಿಸಿಲ್ಲ. ಆದುದರಿಂದ ಈ ವಿಚಾರ ಪರಿಶೀಲಿಸುವಂತೆ ಲೇಬರ್ ಕಮಿಶನರರನ್ನು ಕೇಳಿಕೊಂಡಿದ್ದೇನೆ." ಎಂದು ಹೇಳಿದರಾಗಿ ನವ ಭಾರತದ ತಾರೀಖು 11—10—58ರ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಮಾನ್ಯ ಮಂತ್ರಿಗಳ ಈ ಹೇಳಿಕೆಯನ್ನು ಓದಿ ಕರ್ನಾಟಕದ ಅದರಲ್ಲೂ ಮುಖ್ಯವಾಗಿ ದ. ಕನ್ನಡದ ಬೀಡಿ ಮಜೂರರಲ್ಲಿ ಹೆಚ್ಚಿನ ಆಶ್ಚರ್ಯವುಂಟಾಗಿದೆ. ಮತ್ತು ಈ ಹೇಳಿಕೆಯು ಜನರಲ್ಲಿ ತಪ್ಪು ಕಲ್ಪನೆಯನ್ನುಂಟು ಮಾಡುವಂತಹದಾಗಿದೆ. ಏಕೆಂದರೆ ಇಂದು ಯಾವ ಕನಿಷ್ಠ ವೇತನ ಕಾಯಿದೆಯೂ ದ. ಕನ್ನಡ ಬೀಡಿ ಮಜೂರರಿಗೆ ಅನ್ವಯಿಸುವುದಿಲ್ಲ. ಬೀಡಿ ಮಜೂರರಿಗೆ ದ. ಕನ್ನಡದಲ್ಲಿ ಕನಿಷ್ಠ ವೇತನವನ್ನು ಎಂದೂ ನಿಶ್ಚಯಿಸಿದ್ದಿಲ್ಲ. ಹೀಗಿರುವುದರಿಂದ ಮಾನ್ಯ ಸಚಿವರ ಈ ಹೇಳಿಕೆಯು ಸತ್ಯಕ್ಕೆ ದೂರವಾಗಿದೆ.

ಇನ್ನು ಕನಿಷ್ಠ ಕೂಲಿಯೇ ನಿರ್ಣಯಿಸದಿರುವಾಗ ಮನೆಗಳಲ್ಲಿ ಬೀಡಿ ಕಟ್ಟುವವರಿಗೆ ಕನಿಷ್ಠ ಕೂಲಿ ಸಿಗುತ್ತಿಲ್ಲವೆಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಕನಿಷ್ಠ ಕೂ

ಕೆ. ಮೋನಪ್ಪ ಶೆಟ್ಟಿ

ಲಿ ನಿರ್ಣಯಿಸುವ ಕೆಲಸ ಸರಕಾರಕ್ಕೆ ಸೇರಿದ್ದಲ್ಲದೆ ಇದರಲ್ಲಿ ಲೇಬರ್ ಕಮಿಶನರರು ಮಾಡಬೇಕಾದ್ದೇನೂ ಇಲ್ಲ. ನೆರೆ ಪ್ರಾಂತಗಳಾದ ಕೇರಳ ಮತ್ತು ಮದ್ರಾಸು ಸರಕಾರಗಳು ಬೀಡಿ ಮಜೂರರಿಗೆ ಕನಿಷ್ಠ ಕೂಲಿ ಆಗಲೇ ನಿರ್ಣಯಿಸಿವೆ. ದ. ಕನ್ನಡದ ಬೀಡಿ ಮಾಲಕರುಗಳ ಕೇರಳದಲ್ಲಿರುವ ಬ್ರಾಂಚುಗಳ ಮಜೂರರಿಗೆ ಸಾವಿರ ಬೀಡಿಗೆ ರೂ. 1—14—0 ಕನಿಷ್ಠ ಮಜೂರಿ ದೊರೆಯುತ್ತಿದೆ. ಮಾತ್ರವಲ್ಲ ಮದ್ರಾಸು ಸರಕಾರ ಬೀಡಿ ಮಜೂರರ ಹಿತ ರಕ್ಷಿಸುವ ಕಾನೂನು ರಚಿಸಿ ಜ್ಯಾರಿಗೊಳಿಸಿದೆ. ಆದರೆ ಮೈಸೂರು ಸರಕಾರ ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ಕನಿಷ್ಠ ಕೂಲಿ ನಿರ್ಣಯಿಸಲು ಕನಿಷ್ಠ ಕೂಲಿ ನಿರ್ಣಯಿಸುವ ಕಮಿಟಿಯನ್ನೇ ರಚಿಸಿಲ್ಲ. ಮಾನ್ಯ ಮಂತ್ರಿಗಳು ಇವೆಲ್ಲದರ ಪರಿಜ್ಞಾನವಿಲ್ಲದೆ ಕೊಟ್ಟ ಹೇಳಿಕೆ ಆಶ್ಚರ್ಯಕರವಾಗಿದೆ.

ಇಂದು ಕರ್ನಾಟಕದಾದ್ಯಂತ ಕನಿಷ್ಠ ಕೂಲಿ ನಿರ್ಣಯಿಸಬೇಕೆಂದೂ ಬೀಡಿ ಮಜೂರರ ಹಿತ ರಕ್ಷಿಸುವ ಕಾನೂನು ರಚಿಸಬೇಕೆಂದೂ ಬೀಡಿ ಮಜೂರರು ಚಳುವಳಿ ಹೂಡುತ್ತಿದ್ದಾರೆ. ದ. ಕನ್ನಡದಲ್ಲಂತೂ ಈ ಚಳುವಳಿ ಹೆಚ್ಚಿನ ತೀವ್ರಗತಿಯಿಂದ ನಡೆಯುತ್ತಿದ್ದು ಪ್ರತಿದಿನವೆಂಬಂತೆ ಮಂತ್ರಿಗಳಿಗೆ ಮನವಿಗಳೂ ಠರಾವುಗಳೂ ಪತ್ರಗಳೂ ಅರ್ಪಿಸಲ್ಪಡುತ್ತಿವೆ. ಹೀಗೆ ಮಜೂರರು ಈ ರೀತಿಯಲ್ಲಿ ಕನಿಷ್ಠ ಕೂಲಿಗಾಗಿ ಕಾನೂನಿಗಾಗಿ ಚಳುವಳಿ ನಡೆಸುತ್ತಿರುವಾಗ ಜನರಲ್ಲಿ ತಪ್ಪಭಿಪ್ರಾಯವನ್ನುಂಟು ಮಾಡುವ ಮಾನ್ಯ ಸಚಿವರ ಹೇಳಿಕೆಯಿಂದ ಬಹಳ ವಿಷಾದವಾಗುತ್ತದೆ. ಮಜೂರ ಮಂತ್ರಿಯಾಗಿ ಒಂದು ಜವಾಬ್ದಾರಿ ಸ್ಥಾನದಲ್ಲಿರುವ ಶ್ರೀ ಸುಬ್ರಹ್ಮಣ್ಯಂರವರು ಈ ರೀತಿ ವಾಸ್ತವಿಕತೆಗೆ ದೂರವಿರುವ ಹೇಳಿಕೆ ಕೊಟ್ಟಿರುವುದು ಶೋಚನೀಯವಾಗಿದೆ

ದ. ಕ. ಬೀಡಿ ಅಂಡ್ ಟೊಬೆಕ್ಕೋ ಲೇಬರ್ ಯೂನಿಯನ್ನಿನ ಮಹಾಸಭೆ

ದ. ಕನ್ನಡ ಬೀಡಿ ಅಂಡ್ ಟೊಬೆಕೊ ಲೇಬರ್ ಯೂನಿಯನ್ನಿನ ಮಹಾಸಭೆಯು ತಾ॥ 12—10—58 ರಂದು ಸ್ಥಳೀಯ ಎಸ್. ಸಿ. ಸಿ. ಸಿ. ಬ್ಯಾಂಕ್ ಹೋಲಿನಲ್ಲಿ

(೬ನೇ ಕಾಲಂ ನೋಡಿ)

(೩ನೇ ಕಾಲಂನಿಂದ)

ಶ್ರೀ ಕೆ. ಮೋನಪ್ಪಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿಯವರು ಯೂನಿಯನಿನ ಚಟುವಟಿಕೆಯ ವರದಿಯನ್ನಿತ್ತ ಬಳಿಕ ಲೆಖ್ಖಪತ್ರವನ್ನು ಪರಿಶೀಲಿಸಿ ಸ್ವೀಕರಿಸಲಾಯ್ತು. ಆರು ಸಾವಿರಕ್ಕೂ ಮಿಕ್ಕ ಬೀಡಿ ಮಜೂರರು ಸಹಿ ಮಾಡಿದ; ಸಾವಿರ ಬೀಡಿಗೆ ರೂ. 2 ಕನಿಷ್ಠ ಕೂಲಿ ನಿಶ್ಚಯಿಸಬೇಕು ಮತ್ತು ಬೀಡಿ ಮಜೂರರ ಹಿತ ರಕ್ಷಿಸುವ ಕಾನೂನು ರಚಿಸಬೇಕೆಂಬ ಕೇಳಿಕೆಗಳ ಮನವಿಯನ್ನು ಮಜೂರ ಮಂತ್ರಿಗಳಿಗೆ ಸಮರ್ಪಿಸಿದ ಶಿಷ್ಟಮಂಡಳಿಗೆ ಮಂತ್ರಿಗಳು ಕೊಟ್ಟ ಉತ್ತರವನ್ನು ಶ್ರೀ ಕೃಷ್ಣಪಿಳ್ಳೆಯವರು ವಿವರಿಸಿದರು.

ಶ್ರೀ ಎ. ಶಾಂತಾರಾಂ ಪೈಯವರು ಬೀಡಿ ಮಜೂರರು ತಮ್ಮ ಕೇಳಿಕೆಗಳಿಗಾಗಿ ಯೂನಿಯನಿನ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮುಂದೆ ಬರಬೇಕೆಂದೂ ನವಂಬರ್ ತಿಂಗಳಲ್ಲಿ ಮಂಗಳೂರಿನಿಂದ ಹೊರಡುವ ಜಾಥಾವನ್ನು ಹೊರಡಿಸಲು ಮಾಡಿರುವ ನಿರ್ಣಯವನ್ನು ವಿವರಿಸಿ, ಕೊನೆಗೆ ಅಧ್ಯಕ್ಷ ಭಾಷಣ, ಧನ್ಯವಾದಗಳೊಂದಿಗೆ ಸಭೆ ಮುಕ್ತಾಯವಾಯಿತು.

ಮಂತ್ರಿಗಳು ಇರುವುದು ಯಾತಕ್ಕೆ ?

ಬಿಜಾಪುರದಲ್ಲಿ ಶ್ರೀ ಚೆನ್ನಬಸಪ್ಪನವರ ತಾರತಮ್ಯ

ಮಂತ್ರಿ ಚನ್ನಬಸಪ್ಪನವರು ತಾ॥ 15 ರಂದು ಬಿಜಾಪುರದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತ "ಇದು ಪ್ರಜಾಪ್ರಭುತ್ವಯುಗ. ಸರಕಾರವೆಂದರೆ ಜನತೆ, ಜನತೆಯೆಂದರೆ ಸರಕಾರ. ರಾಜ್ಯ ಒಳ್ಳೇದಾದರೂ ನೀವೇ ಕಾರಣ. ರಾಜ್ಯ ಅಧೋಗತಿಗಿಳಿದರೂ ನೀವೇ ಕಾರಣ" ಎಂದು ಹೇಳಿದರು.

ಹಾಗಾದರೆ ಮಂತ್ರಿಗಳು ಪಗಾರ ಮತ್ತು ಭತ್ತೆಗಷ್ಟೇ ಕಾರಣರಲ್ಲವೆ?

● ಬಿಜಾಪುರ ಜಿಲ್ಲೆಯಲ್ಲಿ ನೋಡಿದಲ್ಲೆಲ್ಲ ನೀರೇನೀರು, ಎಲ್ಲೆಲ್ಲೂ ಖನಿಜಸಂಪತ್ತು, ನೈಸರ್ಗಿಕಸಂಪತ್ತು, ಜನಸಂಪತ್ತು, ಬುದ್ಧಿಸಂಪತ್ತು, ವಿದ್ಯಾಸಂಪತ್ತು, ಆದರೆ ಈ ಜಿಲ್ಲೆಗೆ ದುಷ್ಕಾಳಜಿಲ್ಲೆಯೆಂದು ಹೆಸರು. ಬಿಜಾಪುರಕ್ಕೆ ದುಷ್ಕಾಳಜಿಲ್ಲೆಎಂಬ ಹೆಸರನ್ನು ನಾಮಶೇಷಮಾಡಿಯೇ ತೀರುತ್ತೇನೆ.

● ಡ್ಯಾಬೇರಿ ಕೆರೆಯ ಕೆಲಸ ಕಳೆದ ಮೂರು ವರ್ಷಗಳಿಂದ ಬಂದಾಗಿದ್ದು, ಈ ವರ್ಷ ಬಜೆಟ್ಟನಲ್ಲಿ ಹಣವಿಲ್ಲದಿದ್ದರೂ ಕೂಡ ನಾಳೆ ಮುಂಜಾನೆಯಿಂದ ಈ ಕೆಲಸ ಪ್ರಾರಂಭಿಸಲು ಹುಕುಂ ಮಾಡಿದ್ದೇನೆ.

ನಾಗಠಾಣ ಕೆರೆಯಿಂದಾಗಿ ನೂರಾರು ಎಕ್ರೆ ಭೂಮಿ ಮುಳುಗುವದಿದ್ದು, ಈ ಜಮೀನಿನ ಮಾಲಿಕರಿಗೆ 7 ವಾರದೊಳಗಾಗಿ ಪರಿಹಾರಧನವನ್ನು ಕೊಟ್ಟೇತೀರಬೇಕೆಂದು ಎಕ್ಸಿಕ್ಯೂಟಿವ್ ಎಂಜಿನಿಯರರಿಗೆ ಹುಕುಂ ಮಾಡಿದ್ದೇನೆ.

ಎನ್. ಕೆ. ಉಪಾಧ್ಯಾಯರು ಜನರ ಮನವಿಗಳನ್ನರ್ಪಿಸಲು ಹೋದಾಗ.

ಉಪಾಧ್ಯಾಯ–ಜನರು ವಿದ್ಯುತ್‌ಶಕ್ತಿ ಪೂರೈಕೆಸಂಬಂಧ ಬಹಳ ತಕರಾರು ಮಾಡುತ್ತಿದ್ದಾರೆ. ಹಲವಾರು ಅರ್ಜಿಗಳು ನಿಮ್ಮಕಡೆ ಹೋಗಿವೆ.

ಚೆನ್ನಬಸಪ್ಪ—ಸಂಕ್ಷಿಪ್ತದಲ್ಲಿ ಮುಗಿಸಿರಿ, ಅರ್ಜಿಗಳು ಬೇಡ. ವಿದ್ಯುತ್‌ಪೂರೈಕೆ ಸರಿಯಾಗಿಲ್ಲ ತಾನೆ? ಹೂಂ. ಮತ್ತೇನು?

ಉಪಾಧ್ಯಾಯ—ರೈತರು ರಸ್ತೆಯ ಸಲುವಾಗಿ ಅರ್ಜಿತಂದಿದ್ದಾರೆ.

ಮಂತ್ರಿ—ಹಳ್ಳಿಯ ಜನರೇ ರಸ್ತೆ ಮಾಡಬೇಕು. ನೀವು ಅವರಿಂದ ರಸ್ತೆ ಮಾಡಿಸಿ, ಅನಂತರ ನನ್ನ ಕಡೆಗೆ ಬನ್ನಿ. ನಾನು ಕಲ್‌ವರ್ಟ ಅಥವಾ ಮತ್ತೇನಾದರೂ ಬೇಕಿದ್ದರೆ ಮಾಡುತ್ತೇನೆ. ನಮಗೆ ಹಣಕೊಡಿರಿ, ರೊಕ್ಕಾಇಲ್ಲ.

ಉಪಾಧ್ಯಾಯ—ಜನರೇ ಎಲ್ಲ ಮಾಡಬೇಕಾದರೆ ಸರಕಾರವಾದರೂ ಯಾಕೆ ಬೇಕು ?

ಮಂತ್ರಿ—ಕಮ್ಯುನಿಸ್ಟ್ ರಾಜ್ಯಬಂದರೆ ಸ್ವರ್ಗದಿಂದ ಹಣ ಬರುತ್ತದೆಯೆ ?

● ಗಲಗಲಿಎಂಬ ಹಳ್ಳಿಯ ಜನರು ತಮಗೆ ಹಳೆ ಮೈಸೂರು ರಾಜ್ಯದಂತೆ ವಿದ್ಯುತ್ ಮತ್ತು ನೀರಾವರಿ ಬೇಕೆಂದು ಕೇಳಲು, ಮಂತ್ರಿಗಳು "ಎಲ್ಲಿ ಹಳೇ ಮೈಸೂರು—ಎಲ್ಲಿ ಮುಂಬಯಿಕರ್ನಾಟಕ. ನಿಮ್ಮಲ್ಲಿ ಎಲ್ಲಿನೋಡಿದರೂ ನೀರು. ಎಲ್ಲಿನೋಡಿದರೂ ಬೆಳೆ." ಎಂದು ಉದ್ಗಾರ ತೆಗೆದರು.

ಅಲ್ಲಿಯೇ ಒಂದು ನದಿಗೆ ಸೇತುವೆ ಕಟ್ಟಬೇಕೆಂದು ಹೇಳಲು "ಅಂಬ್ಲೀಜೀಯವರು ತಮ್ಮ ಸ್ವಂತಕ್ಕೆಯಿಂದ, ವಲ್ಲಭಾಯಿ ಪಟೇಲ ಸ್ಮಾರಕನಿಧಿಯಿಂದ 4 ಸಾವಿರ ರೂಪಾಯಿ ಕೊಟ್ಟಿದ್ದಾರೆ"ಂದು ಹೇಳಿದರು.

ಬಂಡವಾಳಶಾಹೀ ರಾಷ್ಟ್ರಗಳ ಬಂಡವಾಳ ಭಾರತದ ಪ್ರಗತಿಗೆ ಆತಂಕವಾಗಿದೆ

ದೊಡ್ಡಬಳ್ಳಾಪುರದಲ್ಲಿ ಕಾಂ॥ ಉಪಾಧ್ಯಾಯರ ಭಾಷಣ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ದೊಡ್ಡಬಳ್ಳಾಪುರದ ಆಸ್ಪತ್ರೆ ಮೈದಾನದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ದೊಡ್ಡಬಳ್ಳಾಪುರದ ಪಾರ್ಟಿ ಕಾರ್ಯದರ್ಶಿ ಕಾಂ। ಮುಗುವಾಳಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಸೇರಿದ್ದ ಭಾರಿ ಬಹಿರಂಗ ಸಭೆಯನ್ನುದ್ದೇಶಿಸಿ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮಿತಿಯ ಕಾರ್ಯದರ್ಶಿ ಕಾಂ॥ ಎನ್. ಎಲ್. ಉಪಾಧ್ಯಾಯ ಅವರು ಮಾತನಾಡಿ ಸಮಾಜವಾದಿ ರಾಷ್ಟ್ರಗಳೊಡನೆ ಭಾರತ ಸಂಬಂಧ ಹೊಂದಿದ ಮೇಲೆ ಘನ ಕೈಗಾರಿಕೆಗಳಾದ ಉಕ್ಕು ತೈಲಗಳ ವಿಷಯದಲ್ಲಿ ಭಾರತವು ಸಾಧಿಸಿರುವ ಪ್ರಗತಿಯನ್ನು ವಿವರಿಸಿ ಬಂಡವಾಳಶಾಹಿ ರಾಷ್ಟ್ರಗಳ ವ್ಯಾಪಾರೀ ಮನೋಭಾವದ ನೀತಿಯನ್ನು ವಿವರಿಸಿ, ವಿದೇಶಿ ಬಂಡವಾಳವುಳ್ಳ ನಮ್ಮ ರಾಷ್ಟ್ರದ ಪುನರ್ರಚನೆಗೆ ಹೇಗೆ ಆತಂಕವಾಗಿದೆಯೆಂಬುದನ್ನು ಅಂಕಿ ಅಂಶಗಳ ಸಹಿತ ವಿವರಿಸಿದರು. ಮತ್ತು ಎರಡನೆ ಪಂಚವಾರ್ಷಿಕ ಯೋಜನೆಯ ಬಗ್ಗೆ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಧೋರಣೆಯನ್ನು ವಿವರಿಸಿ ಪ್ರತಿಗಾಮಿ ಶಕ್ತಿಗಳು ಮತ್ತು ಬಂಡವಾಳ ಶಕ್ತಿಗಳು ಯೋಜನೆಯ ತದ್ವಿರುದ್ಧ ನೀತಿಯನ್ನು ಅನುಸರಿಸಿ ಅಮೆರಿಕದ ಬಂಡವಾಳವನ್ನು ಆಮಂತ್ರಿಸುವುದನ್ನು ಕಮ್ಯೂನಿಸ್ಟ್‌ಪಾರ್ಟಿ ವಿರೋಧಿಸುವುದೆಂದರು. ಕೇರಳದ ಬಗ್ಗೆ ಮಾತನಾಡುತ್ತ ಇಂದು ವಿರೋಧ ಪಕ್ಷಗಳು ಅನುಸರಿಸುತ್ತಿರುವ ನೀತಿ ಪ್ರಜಾಪ್ರಭುತ್ವ ತತ್ವಕ್ಕೇ ಹಾಕಿರುವ ಸವಾಲು ಎಂದು ತಿಳಿಸಿ ಜನತೆಯ ಬೆಂಬಲವನ್ನು ಕೋರಿದರು. ನಂತರ ಕಾಮ್ರೇಡ್ ಮರಿದಾಸ್‌ರವರು ಮಾತನಾಡಿ ಕಾರ್ಮಿಕರ ಬಗ್ಗೆ ಕಾಂಗ್ರೆಸ್ಸಿಗರು ಕುಟಿಲ ನೀತಿಯನ್ನನುಸರಿಸಿ ಕಾನೂನನ್ನೇ ಮುರಿಯುವ ನೀತಿ ಸರಿಯಾದುದಲ್ಲವೆಂದು ತಿಳಿಸಿದರು. ಅಧ್ಯಕ್ಷರು ತಾಲ್ಲೂಕಿನ ರೈತರು ಕಾರ್ಮಿಕರು ಈಗಾಗಲೇ ಸಾಕಷ್ಟು ಬೆಂಬಲವನ್ನು ಕಮ್ಯೂನಿಸ್ಟ್ ಪಾರ್ಟಿಗೆ ನೀಡಿರುವುದು ಸಂತೋಷವನ್ನುಂಟುಮಾಡಿದೆಯೆಂದು ತಿಳಿಸಿ ತಾವು ಕಾಂಗ್ರೆಸ್ಸನ್ನು ತ್ಯಜಿಸಿ ಬಂದುದು ವೈಯಕ್ತಿಕ ವಿರೋಧವು ಕಾರಣವಲ್ಲವೆಂದು ತಿಳಿಸಿ ಜನತಾ ಚಳುವಳಿ ಪ್ರಗತಿ ಮತ್ತು ಏಳಿಗೆಯಿಂದಲೇ ಸಮಾಜದ ಪುನರ್ರಚನೆ ಸಾಧ್ಯವೆಂದು ತಾವು ಕಮ್ಯೂನಿಸ್ಟ್ ಪಾರ್ಟಿಗೆ ಸೇರಿದುದಾಗಿ ತಿಳಿಸಿದರು. ಕಾಮ್ರೇಡ್ ಡಿ. ವಿ. ಗಂಗಾಧರ್‌ರವರು ಅತಿಥಿಗಳ ಪರಿಚಯ ಮತ್ತು ಸ್ವಾಗತವನ್ನು ಮಾಡಿದರು.

ರಾಮರಾಜ್ಯದ ಮೈಸೂರಿನ ಸಂಭಾವಿತ ಪೋಲಿಸರು

ಕೃಷಿ ಕಾರ್ಮಿಕನ ಕಾಲು ಮುರಿದು ಹಾಕಿದ್ದಾರೆ

ದುಡಿಯುವವನ ಕೈಗೆ ಭಿಕ್ಷಾಪಾತ್ರೆ

ಸುಮಾರು 40 ವರ್ಷ ವಯಸ್ಸಿನ ಶ್ರೀ ಗೌಡುಗಳ ಮೋಟಯ್ಯನವರು ಸೋಮವಾರಪೇಟೆ ಸಮೀಪವಿರುವ ಮಾಲ್ಪೆ ಗ್ರಾಮದಲ್ಲಿ ಶ್ರೀಮತಿ ಬಿ. ನೀಲಮ್ಮನವರಲ್ಲಿ ಕೃಷಿ ಕೂಲಿಗಾರರಾಗಿ ದುಡಿಯುತ್ತಿದ್ದರು. ತಾ. 30—3—58ರಂದು, ಸಾಯಂಕಾಲ 7¼ ಗಂಟೆಯ ಸಮಯಕ್ಕೆ ಅವರ ಮನೆಯ ಸಮೀಪ ಅವರನ್ನು ಇಬ್ಬರು ಪೋಲೀಸರು ಮತ್ತು ಅಬ್ಕಾರಿ ಇಲಾಖೆಯ ಜವಾನನು ಕಳ್ಳಭಟ್ಟಿ ಸರಾಯಿ ಪತ್ತೆ ಹಚ್ಚುವುದಕ್ಕೆಂದು ಹಿಡಿದು ನಿಲ್ಲಿಸಿ, ನೆಲಕ್ಕುರುಳಿಸಿ, ಕಾಲುಗಳ ಮೇಲೆ ಬೂಟ್ಸ್ ಕಾಲಿನಲ್ಲಿ ಒದ್ದು, ಅಂಗಾಲುಗಳಿಗೆ ಬೆತ್ತದ ಕೋಲಿನಿಂದ ಹೊಡೆಯುತ್ತಿದ್ದಾಗ ನೋವು ತಾಳಲಾರದೆ ಅವರು ಒದರಲು, ಆ ಕಾಲಿಗೆ ಪೋಲಿಸರು ಮತ್ತೂ ಬಲವಾಗಿ ಒದ್ದ ಕಾರಣ ಕಾಲು ಮುರಿಯಿತು. ಅವರನ್ನು ರಾತ್ರೆ ೧೦|| ಗಂಟೆಗೆ ಸೋಮವಾರಪೇಟೆ ಸರಕಾರಿ ಅಸ್ಪತ್ರೆಗೆ ಪೋಲಿಸರೇ ಸಾಗಿಸಿದರು. ಕೂಡಲೆ ಕಮ್ಯೂನಿಸ್ಟ್ ಪಾರ್ಟಿಯ ಸೋಮವಾರಪೇಟೆ ಶಾಖೆಯ ಕಾರ್ಯದರ್ಶಿಯವರು ಈ ಬಗ್ಗೆ ಸರಕಾರದ ಹಲವಾರು ಮೇಲಾಧಿಕಾರಿಗಳಿಗೆ ತಂತಿ ಮೂಲಕ ತಿಳುಹಿಸಿದರು. ತನಿಖೆ ನಡೆಯಿಸಿ, ತಕ್ಕ ಕ್ರಮ ಕೈಗೊಳ್ಳುವೆನೆಂದು ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರು ಭರವಸೆಯನ್ನಿತ್ತಿದ್ದರು.

ಶ್ರೀ ಮೋಟಯ್ಯನವರ ಎಡಕಾಲನ್ನು ಆಸ್ಪತ್ರೆಯಲ್ಲಿ ಆಪರೇಶನ್ ಮಾಡಿ ತೆಗೆದುಹಾಕಿದರು. ಎರಡು ತಿಂಗಳು ಹದಿಮೂರು ದಿವಸ ಆಸ್ಪತ್ರೆಯಲ್ಲಿ ಇದ್ದ ನಂತರ ಅವರು ಸೋಮವಾರಪೇಟೆಯ ಬಸ್ಸು ನಿಲ್ದಾಣ ಮತ್ತು ಸಂತೆಮಾಳದಲ್ಲಿ ಭಿಕ್ಷಾಟನೆ ಮಾಡಿ ಕಾಲ ಕಳೆಯುತ್ತಿದ್ದರು. ಅವರನ್ನು ತಾ. 30—7—58ರಂದು ಪೋಲಿಸರು ಮಡಿಕೇರಿ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಕಳ್ಳಭಟ್ಟಿ ಸರಾಯಿಗೆ ಸಂಬಂಧಪಟ್ಟ ಕೇಸಿನಲ್ಲಿ ಆಪಾದಿತರನ್ನಾಗಿ ಮಾಡಿ ಹಾಜರುಪಡಿಸಿದರು. ಅವರಿಗೆ ಜಾಮೀನು ನಿಲ್ಲಲು ಯಾರೂ ಇಲ್ಲದ್ದರಿಂದ ಮಡಿಕೇರಿ ಜೈಲಿನಲ್ಲಿ ಗುಮಾನಿ ಕೈದಿಯಾಗಿ ಉಳಿಯಬೇಕಾಯಿತು. ಅವರ ಪರವಾಗಿ ಕೋರ್ಟಿನಲ್ಲಿ ಎಡ್ವೋಕೇಟ್ ಶ್ರೀ ಬೆಳ್ಳಪ್ಪನವರು ವಕಾಲತ್ತು ವಹಿಸಿದ್ದರು. ಕಾಲು ಮುರಿದಿದ್ದರ ಬಗ್ಗೆ ಅವರು ಕೋರ್ಟಿನಲ್ಲಿ ಪೂರ್ಣ ವಿವರವನ್ನು ಕೊಟ್ಟಿರುತ್ತಾರೆ. ಅವರ ಮೇಲೆ ಹೂಡಿದ ಕೇಸಿನ ವಿಚಾರಣೆ ಮುಗಿದು, ತಾ. 20-10-58ರಂದು ಅವರನ್ನು ನಿರಪರಾಧಿ ಎಂದು ಬಿಡುಗಡೆ ಮಾಡಿದಾಕ್ಷಣ ಅವರು ಮಡಿಕೇರಿಯ ಕಮ್ಯೂನಿಸ್ಟ್ ಪಾರ್ಟಿ ಆಫೀಸಿಗೆ ಬಂದು, ಪೋಲೀಸರು ಅವರ ಕಾಲನ್ನು ಮುರಿದುದರ ಬಗ್ಗೆ ಪರಿಹಾರವೇನಾದರೂ ಸಿಕ್ಕಬಹುದೊ ಎಂದು ಅರಿಕೆ ಮಾಡಿಕೊಂಡರು.

ಶ್ರೀ ಮೋಟಯ್ಯನವರು ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಮಣ್ಯದ ಸಮೀಪವಿರುವ ಮರ್ದಾಲ ಗ್ರಾಮದವರು. ಕಳೆದ 25 ವರ್ಷಗಳಿಂದ ಅವರು ಸೋಮವಾರಪೇಟೆ ಸಮೀಪದಲ್ಲಿ ಕೃಷಿ ಕೂಲಿಗಾರರಾಗಿ ಜೀವನ ಸಾಗಿಸುತ್ತಿದ್ದರು. ಅವರ ಮದುವೆ ನಿಶ್ಚಯವಾಗಿತ್ತು. ಪೋಲೀಸರು ಕಾಲು ಮುರಿಯದಿದ್ದಿದ್ದರೆ, ಅವರ ಮದುವೆಯು ಕಾಲು ಮುರಿದ 15 ದಿನಗಳಲ್ಲಿ ನೆರವೇರುತ್ತಿತ್ತು.

ಸರಕಾರವು ಅವರಿಗೆ ಯೋಗ್ಯ ಪರಿಹಾರವನ್ನು ಇನ್ನೂ ಕೊಟ್ಟಿಲ್ಲ. ಅವರ ಕಾಲು ಮುರಿದು ಅವರ ಜೀವನವನ್ನೇ ಹಾಳು ಮಾಡಿರುವ ಈ ಕ್ರೂರ ಕೃತ್ಯಕ್ಕೆ ಪರಿಹಾರ ಎಷ್ಟು ಕೊಟ್ಟರೇನು? ಅದನ್ನಾದರೂ ಬೇಗನೆ ಕೊಡುವ ಕರುಣೆ ಸರಕಾರಕ್ಕೆ ಎಲ್ಲಿದೆ?

ಕೇರಳದಲ್ಲಿ ನಡೆದ ಗೋಳಿಬಾರಿನ ಬಗ್ಗೆ

ವಿಚಾರಣೆ ನಡೆಸಲಾಗುವುದು

ನ್ಯಾಯಾಂಗ ಸಚಿವರ ಘೋಷಣೆ

ಕೇರಳದ ನ್ಯಾಯಾಂಗ ಸಚಿವರಾದ ಶ್ರೀ ಕೃಷ್ಣ ಐಯರ್‌ರವರು ಮುಷ್ಕರ ಪೀಡಿತ ಪ್ರದೇಶಗಳಿಗೆಲ್ಲ ಭೇಟಿಕೊಟ್ಟು ತೋಟಗಳ ಮಾಲಿಕರನ್ನು ಕಂಡು ಶಾಂತಿ ವ್ಯವಸ್ಥೆಗಳ ಸ್ಥಿತಿಗತಿಗಳ ಬಗ್ಗೆಯೂ ಮಾತನಾಡಿದರು.

ಕಾರ್ಮಿಕರಿಗೆ ಆಶ್ವಾಸನೆ

ಮುಷ್ಕರ ಹೂಡಿದ ಕಾರ್ಮಿಕರ ಸಂಘವಾದ ಎ. ಐ. ಟಿ. ಯು. ಸಿ. ಯ ಕಾರ್ಯದರ್ಶಿನಿಯಾದ ಶ್ರೀಮತಿ ರೋಜಮ್ಮ ಪುನ್ನೂಸ್ ಅವರಿಗೆ ಶ್ರೀಕೃಷ್ಣ ಐಯರ್‌ರವರು ಈ ಸಂಬಂಧದಲ್ಲಿ ಕಾಗದವೊಂದನ್ನು ಬರೆದುದನ್ನು ತಿಳುಹಿಸಿದರಲ್ಲದೆ "ಪೋಲಿಸರು ಅಸಮಂಜಸ ರೀತಿಯಲ್ಲಿ ವರ್ತಿಸಿ ಅಥವಾ ಅಡ್ಡಹಾದಿ ಹಿಡಿದಿರುವ ಬಗ್ಗೆ ದೂರುಗಳು ಬಂದಿರುವುದು ನಿಜ. ಅಂತೆಯೇ ಇದನ್ನೆಲ್ಲ ಸಂಪೂರ್ಣ ತನಿಖೆಗೊಳಪಡಿಸಲಾಗುವದಲ್ಲದೆ ಪೋಲೀಸರು ಹೊಡೆಯುವುದು ಮುಂತಾದ ಕ್ರಮಗಳಲ್ಲಿ ಇನ್ನು ಮೇಲೆ ತೊಡಗಕೂಡದು ಎಂದು ಅಗತ್ಯವಾದ ಆಜ್ಞೆಗಳನ್ನು ಕೂಡಲೆ ಕೊಡಲಾಗುವುದು." ಎಂದು ಶ್ರೀಮತಿ ರೋಸಮ್ಮ ಪುನ್ನೂಸ್‌ರವರಿಗೆ ಆಶ್ವಾಸನೆ ಕೊಡಲಾಗಿದೆಯೆಂದೂ ಹೇಳಿದರು.

"ಕಾರ್ಮಿಕರು ಘರ್ಷಣೆಗಳನ್ನು ಆದಷ್ಟು ತಪ್ಪಿಸಬೇಕು. ವದಂತಿಗಳನ್ನು ಹುಟ್ಟಿಸಿ ಬೆಳೆಸಕೂಡದು ಅಥವಾ ನಂಬಕೂಡದು. ಪೋಲೀಸರು ಪ್ರತಿಯೊಬ್ಬರ ಆಸ್ತಿ-ಜೀವಿತಗಳನ್ನು ರಕ್ಷಿಸುತ್ತಾರೆ. ಆದರೆ ಮುಷ್ಕರಗಳನ್ನು ಮುರಿಯಲು ಅಥವಾ ಜನರನ್ನು ಭೀತಗೊಳಿಸಲು ಏನನ್ನೂ ಮಾಡಲಾರರು." ಎಂದೂ ಹೇಳಿದರು.

ಶ್ರೀಮತಿ ಪುನ್ನೂಸ್‌ರವರಿಗೆ ಬರೆದ ಕಾಗದದಲ್ಲಿ—

"ಕಾನೂನು ಮತ್ತು ವ್ಯವಸ್ಥೆಗಳ ಹೊಣೆಗಾರಿಕೆಯನ್ನು ಹೊತ್ತಿದ್ದ ಸಶಸ್ತ್ರ ಪೋಲೀಸರಿಗೆ ಪೋಲೀಸ್ ಅಧಿಕಾರಿಗಳ ಮೂಲಕ ಪೋಲೀಸರಿಗೆ ಪರಿಸ್ಥಿತಿಯನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಅತ್ಯಂತ ಎಚ್ಚರಿಕೆಯಿಂದ ಇದ್ದು ಚತುರ ರೀತಿಯಿಂದ ನಡೆದುಕೊಳ್ಳಲು ಸ್ಪಷ್ಟ ಹಾಗೂ ಕಡ್ಡಾಯದ ಆಜ್ಞೆಗಳನ್ನು ನೀಡಲಾಗಿತ್ತು. ಈ ಘಟನೆಗಳ ಬೆಳಕಿನಲ್ಲಿ ನೋಡಿದಾಗ ಗೋಳಿಬಾರ್ ನಡೆಸುವ ಪ್ರಸಂಗಗಳೇನಾದರೂ ಉದ್ಭವಿಸಿದ್ದವೆಂದು ನಿರೀಕ್ಷಿಸಿರಲಿಲ್ಲ" ಎಂದೂ ತಿಳಿಸಿದ್ದಾರೆ.

—

ಸ್ವಲ್ಪದರಲ್ಲಿ ಸುದ್ದಿ

(೨ನೇ ಪುಟದಿಂದ)

ಶುದ್ಧ ಅಣುಬಾಂಬ್ 'ಗಳನ್ನೇ ಬಳಸಲಾಗುವುದು ಎಂದು ಹೇಳುವ ಮಾತು ಶುದ್ಧ ಠಕ್ಕುತನದ್ದಾಗಿದೆ" ಎಂಬುದಾಗಿ ಬ್ರಿಟಾನಿನ ವಿಖ್ಯಾತದಾರ್ಶನಿಕ ಹಾಗೂ ನೋಬೆಲ್ ಪಾರಿತೋಷಕ ವಿಜೇತ ಬರ್ಟ್ರಾಂಡ್ ರಸೆಲ್ ಅವರು ಟೆಲಿವಿಷನ್ ಕಾರ್ಯಕ್ರಮವೊಂದರಲ್ಲಿ ಅಮೆರಿಕೆಯ ಅಣುಶಕ್ತಿ ನಿಯೋಗದ ಸದಸ್ಯ ಡಾ|| ವಿಲಿಯರ್ಡ್ಸ್ ಲಿಬ್ಬಿ ಅವರಿಗೆ ತಿಳುಹಿಸಿದರು.

"ಈ ಬಾಂಬುಗಳ ಬಗ್ಗೆ ಅಮೇರಿಕೆಯು ಹೆಮ್ಮೆಪಟ್ಟಿದೆ" ಎಂಬ ಲಿಬ್ಬಿಯ ಮಾತಿನ ಬಗ್ಗೆ "ಪರಿಶುದ್ಧ ಬಾಂಬ್ ಮಾಡುವ ವಿಧಾನವನ್ನು ರಷ್ಯನ್ನರಿಗೇಕೆ ತಿಳುಹಿಸಿಲ್ಲ?" ಎಂದೂ ಅವರು ಪ್ರಶ್ನಿಸಿದರು.

ಪರಿಶುದ್ಧ ಬಾಂಬ್ ಎಂಬುದು ಶುದ್ಧ ಮೋಸವೆಂದೂ, ಅರ್ಥವಿಲ್ಲದ ಮಾತೆಂದೂ, ಯಾವದರಿಂದಾದರೂ ಅಪಾಯ ತಪ್ಪಿದ್ದಲ್ಲವೆಂದೂ ರಸ್ಸೆಲ್ಲರು ಅಭಿಪ್ರಾಯಪಟ್ಟಿದ್ದಾರೆ.

ಅಣು ಆಸ್ಫೋಟನೆಗಳ ನಿಲುಗಡೆಯ ಬಗ್ಗೆ ಭಾರತವು ತಂದಿರುವ ಗೊತ್ತುವಳಿಗೆ ಹೆಚ್ಚು ಬೆಂಬಲ ಪಡೆಯಲು ಶ್ರೀ ವಿ. ಕೆ. ಕೃಷ್ಣಮೆನನ್‌ರು ಭದ್ರತಾ ಸಮಿತಿಯಲ್ಲಿ ತುಂಬಾ ಪ್ರಯತ್ನ ಮಾಡುತ್ತಿದ್ದಾರೆ. ಪ್ರಾನ್ಸ್ ಒಂದನ್ನುಳಿದು ಎಲ್ಲಾ ರಾಷ್ಟ್ರಗಳೂ ನ್ಯೂಕ್ಲೆಯರ್ ಪ್ರಯೋಗಗಳ ನಿಷೇಧಕ್ಕೆ ತಾತ್ವಿಕವಾಗಿ ಒಪ್ಪಿಗೆ ನೀಡಿವೆಯಾದರೂ ಯಾವಷರತ್ತೂ ಇಲ್ಲದೆ ರಷ್ಯವು ಸ್ಫೋಟನೆಗಳ ನಿಲುಗಡೆಗೆ ಒಪ್ಪಿಕೊಂಡಿದ್ದರೆ ಅಮೇರಿಕೆಯು ಮೂರು ಷರತ್ತುಗಳನ್ನು ಹಾಕಿದೆ.

ಕೇರಳದಲ್ಲಿ ಗೋಳಿಬಾರ್...

(೩ನೇ ಪುಟದಿಂದ)

ಉಪಯೋಗಿಸುವದಾಗಲಿ ಇದಾವುದನ್ನೂ ಮಾಡಕೂಡದೆಂದು ಕೇರಳ ಕಮ್ಯೂನಿಸ್ಟ್ ಪಾರ್ಟಿಯು ಹಾಗೂ ಕಮ್ಯೂನಿಸ್ಟ್ ನಾಯಕತ್ವದಲ್ಲಿರುವ ಸರ್ಕಾರದ ಘೋಷಿತ ನೀತಿಯಾಗಿದೆಯೆಂಬುದನ್ನು ಇನ್ನೊಮ್ಮೆ ಸ್ಪಷ್ಟಪಡಿಸುತ್ತೇವೆ. ಪೋಲೀಸರು ಸ್ಥಿತಿ ಅತ್ಯಂತ ಭಯಂಕರವಾದಾಗ ಅಥವಾ ಶಾಂತಿಗೆ ಭಂಗವುಂಟಾಗುವಂತಿದ್ದರೆ ಮಾತ್ರ ಮಧ್ಯೆ ಪ್ರವೇಶಿಸಬೇಕು." ಎಂದೂ ಪ್ರಕಟಣೆಯು ತಿಳುಹಿಸುತ್ತದೆ.

ಪ್ರಕಟಣೆಯು ಈ ಮುಷ್ಕರವನ್ನು "ನ್ಯಾಯದ ಹಾಗೂ ಬಹುಕಾಲದ ಬೇಡಿಕೆಗಳನ್ನು ಪಡೆಯಲು ನಡೆಸಿದ ಶಾಂತಿಯುತವಾದ ಧೀರ ಹೋರಾಟ" ಎಂದು ಕರೆದಿದೆ.

ಬ್ರಿಟಿಷ್ ಪ್ಲಾಂಟರುಗಳೇ ಹೆಚ್ಚಾಗಿರುವ ಯು. ಪಿ. ಎಸ್. ಐ. (ದಕ್ಷಿಣ ಭಾರತದ ಪ್ಲಾಂಟರುಗಳ ಸಂಘ) ಮತ್ತು ಕೇರಳ ಪ್ಲಾಂಟರ್ಸುಗಳ ಸಂಘ ಇವರ ಪಿತೂರಿಯಿಂದ ನಡೆದ ಘಟನೆಗಳು ಇವಾಗಿವೆಯೆಂದೂ ಪ್ರಕಟಣೆ ತಿಳುಹಿಸುತ್ತದೆ.

ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಬಹಿರಂಗ ಸಭೆ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ದ. ಕ. ಜಿಲ್ಲಾ ಸಮಿತಿಯ ಕದ್ರಿ ಶಾಖೆಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ತಾ. 13—10—58ರಂದು ಶ್ರೀ ಎ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು.

ಶ್ರೀಗಳಾದ ಎ. ಶಾಂತಾರಾಮ ಪೈ, ಕೆ. ಮೋನಪ್ಪ ಶೆಟ್ಟಿ ಇವರು ಸಭೆಯಲ್ಲಿ ಭಾಷಣ ಮಾಡಿದರು. ಕೇರಳ ಸರಕಾರದ ವಿರುದ್ಧ ಇಂದು ನಡೆಯುತ್ತಿರುವ ಅಪಪ್ರಚಾರ ಮತ್ತು ಅದರ ಉದ್ದೇಶವನ್ನು ಕೂಲಂಕುಷವಾಗಿ ವಿವರಿಸಿ, ನಿಜವಾಗಿಯೂ ಕೇರಳದ ಪ್ರತಿಪಕ್ಷಗಳು ಎಬ್ಬಿಸುತ್ತಿರುವ ಕೂಗು ನಿರಾಧಾರವಾದುದೆಂದೂ, ಇದನ್ನು ಅಲ್ಲಿಯ ಜನತೆಯೇ ತೋರಿಸಿಕೊಟ್ಟಿದೆ ಎಂದೂ, ಭಾಷಣ ಕರ್ತರು ತಿಳಿಸಿದರು. ಹಟ್ಟಿ ಚಿನ್ನದ ಗಣಿ ಮಜೂರರಿಗೆ ಬೆಂಬಲ ನೀಡುವ ಮತ್ತು ದುರ್ಗಾಪರಮೇಶ್ವರಿ ಮೋಟಾರ್ ಸರ್ವಿಸ್‌ನ ಮಾಲಕರು ಹತ್ತೊಂಭತ್ತು ಮಂದಿ ಮಜೂರರನ್ನು ಕೆಲಸದಿಂದ ನಿವೃತ್ತಿ ಮಾಡಿರುವುದನ್ನು ಖಂಡಿಸುವ ಠರಾವುಗಳು ಸಭೆಯಲ್ಲಿ ಮಂಜೂರಾದುವು.

ಪ್ರಯೋಗಗಳನ್ನು ನಿಲ್ಲಿಸಬೇಕೆಂದೂ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಸಂಗ್ರಹಗಳನ್ನು ನಿರ್ನಾಮಗೊಳಿಸಬೇಕೆಂದೂ ಭಾರತದ ಗೊತ್ತುವಳಿಯಾಗಿದೆ.

ತೈಲಶುದ್ಧೀಕರಣದ ಒಪ್ಪಂದ

ರುಮೇನಿಯಾದ ನೆರವಿನಿಂದ ಭಾರತದಲ್ಲಿ ತೈಲ ಶುದ್ಧೀಕರಣ ಯಂತ್ರವೊಂದನ್ನು ಸ್ಥಾಪಿಸುವ ಒಪ್ಪಂದಕ್ಕೆ ಬುಡಾಪೆಸ್ಟ್‌ನಲ್ಲಿ ಸಹಿ ಹಾಕಲಾಯಿತು. ಭಾರತದ ಕೇಂದ್ರ ಗಣಿ ಸಚಿವ ಕೆ. ಡಿ. ಮಾಳವಿಯ ಅವರು ಅಂಕಿತ ಹಾಕಿದರು.

ಭಾರತದ ತೈಲೋದ್ಯಮದಲ್ಲಿ ಇದೊಂದು ಪ್ರಗತಿಪರ ಲಕ್ಷಣವೆಂದು ಭಾವಿಸಲಾಗುತ್ತಿದೆ.

ಬೆಂಗಳೂರು—

ನಗರದ ಕಾರ್ಮಿಕರ ಬೃಹತ್ ಸಭೆ

ಕಳೆದ ಶನಿವಾರ 18—10—1958 ರಂದು ನಗರದ ಸುಭಾಷ್ ನಗರದಲ್ಲಿ ಕಾರ್ಮಿಕರ ಬೃಹತ್ ಸಭೆ ಜರುಗಿತು. ನಗರದ ನಾನಾ ಕೈಗಾರಿಕೆಗಳಲ್ಲಿನ ಕಾರ್ಮಿಕರು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಭೆಗೆ ಆಗಮಿಸಿದರು.

ಸಭೆಯ ಅಧ್ಯಕ್ಷತೆಯನ್ನು ಹಿಂದೂಸ್ತಾನ್ ವಿಮಾನ ಕಾರ್ಖಾನೆ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಎಫ್. ಲೂಯಿಸ್‌ರವರು ವಹಿಸಿದ್ದರು.

ಅಖಿಲ ಭಾರತ ಬ್ಯಾಂಕ್ ನೌಕರರ ನಾಯಕರಾದ ಶ್ರೀ ಪ್ರಭಾತ್‌ಕರ್ ಎಂ. ಪಿ., ಮೈಸೂರು ರಾಜ್ಯ ಬ್ಯಾಂಕ್ ನೌಕರರ ಫೆಡರೇಶನ್ನಿನ ಕಾರ್ಯದರ್ಶಿ ಶ್ರೀ ಪಿ. ಎಸ್. ಸುಂದರೇಶನ್, ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಉಪಾಧ್ಯಕ್ಷ ಶ್ರೀ ಎಸ್. ಸೂರ್ಯನಾರಾಯಣರಾವ್ ಮತ್ತಿತರರು ಸಭೆಯನ್ನುದ್ದೇಶಿಸಿ ಮಾತನಾಡಿದರು. ನಗರದಲ್ಲಿ ಸಂಯುಕ್ತ ಟ್ರೇಡ್ ಯೂನಿಯನ್ ಐಕ್ಯತೆಯನ್ನು ಬೆಳೆಸುವ ಅಗತ್ಯತೆಯನ್ನು ಕುರಿತು ಭಾಷಣಕಾರರು ವಿವರಿಸಿದರು.

ಸಭೆಯನ್ನು ಕೆ. ಪಿ. ಟಿ. ಯು. ಸಿ. ಎಚ್. ಎಂ. ಎಸ್., ಬ್ಯಾಂಕ್ ನೌಕರರ ಫೆಡರೇಶನ್, ಇನ್ಷೂರೆನ್ಸ್ ನೌಕರರ ಫೆಡರೇಶನ್ ಮತ್ತಿತರ ಕಾರ್ಮಿಕ ಸಂಘಗಳು ಒಂದುಗೂಡಿ ಏರ್ಪಡಿಸಿದ್ದುವು.

ನಗರದಲ್ಲಿ ಟ್ರೇಡ್ ಯೂನಿಯನ್ ಕೌನ್ಸಿಲ್ ಸ್ಥಾಪನೆಗೆ ಯತ್ನ

ಬೆಂಗಳೂರಿನ ವಿವಿಧ ಟ್ರೇಡ್ ಯೂನಿಯನುಗಳ ಪ್ರತಿನಿಧಿಗಳು ಅಕ್ಟೋಬರ್ ೧೧ ರಂದು ಮೈಸೂರು ರಾಜ್ಯ ಬ್ಯಾಂಕ್ ನೌಕರರ ಫೆಡರೇಶನ್ನಿನ ಕಛೇರಿಯಲ್ಲಿ ಸಭೆ ಸೇರಿದ್ದು, ನಗರದ ಟ್ರೇಡ್ ಯೂನಿಯನ್ ಕೌನ್ಸಿಲ್ ಒಂದನ್ನು ರಚಿಸಲು ನಿರ್ಧರಿಸಿದ್ದಾರೆ. ಈ ಸಭೆಯ ಅಧ್ಯಕ್ಷತೆಯನ್ನು ಹಿಂದ್ ಮಜ್ದೂರ್ ಸಭೆಯ ಶ್ರೀ ಎಸ್. ವೆಂಕಟರಾಂ ವಹಿಸಿದ್ದರು. ಟ್ರೇಡ್ ಯೂನಿಯನ್ ಕೌನ್ಸಿಲ್‌ನ ಅಂಗರಚನೆ ಸಿದ್ಧಗೊಳಿಸಲು ವಿವಿಧ ಟ್ರೇಡ್ ಯೂನಿಯನ್ ಕೇಂದ್ರ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಗಿದೆ.

ಎ. ಐ. ಟಿ. ಯು. ಸಿ. ಜನರಲ್ ಕೌನ್ಸಿಲ್ ಸಭೆಗೆ ಸಿದ್ಧತೆ

ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಜರುಗಲಿರುವ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಜನರಲ್ ಕೌನ್ಸಿಲಿನ ಸಭೆಗೆ ಸಿದ್ಧತೆ ನಡೆಯುತ್ತಿದೆ.

ಕಳೆದ ವಾರ ಈ ಸಂಬಂಧದಲ್ಲಿ ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಆಶ್ರಯದಲ್ಲಿ ನಗರದ ಟ್ರೇಡ್ ಯೂನಿಯನ್ ಪ್ರತಿನಿಧಿಗಳ ಸಭೆಯು ಸೇರಿದ್ದಿತು. ಸಭೆಯಲ್ಲಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಪ್ರಭಾತ್‌ಕರ್ ಎಂ. ಪಿ.ಯವರು ಮಾತನಾಡಿ, ಎ.ಐ.ಟಿ.ಯು.ಸಿ. ಯನ್ನು ಬಲಗೊಳಿಸುವ ಅಗತ್ಯತೆಯನ್ನು ವಿವರಿಸಿದರು.

ಸಭೆಯ ಉದ್ದಿಶ್ಯವನ್ನು ಶ್ರೀ ಎಸ್. ಸೂರ್ಯನಾರಾಯಣರಾವ್‌ರವರು ತಿಳಿಸಿದ ನಂತರ, ಎ. ಐ. ಟಿ. ಯು. ಸಿ. ಜನರಲ್ ಕೌನ್ಸಿಲ್ ಸಭೆಗೆ ಸಿದ್ಧತೆ ನಡೆಸಲು ಸ್ವಾಗತ ಸಮಿತಿಯೊಂದನ್ನು ರಚಿಸಲಾಯಿತು. ಸ್ವಾಗತ ಸಮಿತಿಗೆ ಶ್ರೀ ಕೆ. ಎಸ್. ವಾಸರ್ರವರನ್ನು ಅಧ್ಯಕ್ಷರಾಗಿಯೂ ಶ್ರೀ ಎಂ. ಸಿ. ನರಸಿಂಹನ್ (ಎಂ.ಎಲ್.ಎ.) ರವರನ್ನು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್. ಸೂರ್ಯನಾರಾಯಣರಾವ್ ಇವರನ್ನು ಪ್ರಧಾನ ಕಾರ್ಯದರ್ಶಿಯಾಗಿಯೂ, ಶ್ರೀಗಳಾದ ಎಂ. ಎಸ್. ರಾಮರಾವ್, ಐ. ಮರಿದಾಸ್, ಎಸ್. ಜಿ. ಜಯರಾಂ ಇವರನ್ನು ಕಾರ್ಯದರ್ಶಿಗಳಾಗಿಯೂ ಶ್ರೀ ಎಂ. ಎಸ್. ಕೃಷ್ಣನ್‌ರವರನ್ನು ಖಜಾಂಚಿಯಾಗಿಯೂ ಆರಿಸಲಾಗಿದೆ. ಪ್ರತಿ ಸಂಘದಿಂದಲೂ ಇಬ್ಬರು ಪ್ರತಿನಿಧಿಗಳಂತೆ ಸ್ವಾಗತ ಸಮಿತಿಗೆ ತೆಗೆದುಕೊಳ್ಳುವುದಾಗಿ ತೀರ್ಮಾನಿಸಲಾಗಿದೆ. ಜನರಲ್ ಕೌನ್ಸಿಲ್ ಸಭೆಗೆ ನಿಧಿ ಸಂಗ್ರಹಿಸಲು ಕಾರ್ಮಿಕರಿಂದ ಇಪ್ಪತ್ತೈದು ನಯೆ ಪೈಸೆಯಂತೆ ವಸೂಲಿ ಮಾಡಲು ತೀರ್ಮಾನಿಸಲಾಗಿದೆ.

‘ಜನಶಕ್ತಿ’ ವಾರ್ಷಿಕ ವಿಶೇಷ ಸಂಚಿಕೆ

ನವೆಂಬರ್ 1958 ಕ್ಕೆ ‘ಜನಶಕ್ತಿ’ ಪ್ರಕಟಣೆಯ ಏಳನೆಯ ವರ್ಷ ಆರಂಭವಾಗುತ್ತದೆ. ಈ ಸಂದರ್ಭದಲ್ಲಿ ‘ಜನಶಕ್ತಿ’ ವಾರ್ಷಿಕ ವಿಶೇಷಾಂಕವನ್ನು ತರಲಾಗುವುದು. ವಿಶೇಷ ಲೇಖನಗಳು, ಕತೆ, ಕವನಗಳನ್ನೊಳಗೊಂಡ ಈ ಸಂಚಿಕೆಯು ಉತ್ತಮವಾದ ತ್ರಿವರ್ಣ ರಕ್ಷಾಕವಚವನ್ನು ಹೊತ್ತು ಪ್ರಕಟಗೊಳ್ಳುವುದು. ವಿಶೇಷ ಸಂಚಿಕೆಯು ನವಂಬರ್ ಎರಡನೆಯ ವಾರದಲ್ಲಿ ಹೊರಬೀಳುವುದು.

ಕ್ವಾರ್ಟರ್ ಕ್ರೌನ್ ಆಕಾರದಲ್ಲಿದ್ದು. ನೂರು ಪುಟಗಳನ್ನೊಳಗೊಂಡಿರುವ ವಿಶೇಷಾಂಕದ ಬಿಡಿ ಪ್ರತಿ ಬೆಲೆ 0—75 ನಯೆಪೈಸೆ.

ಏಜಂಟರು ತಮಗೆ ಎಷ್ಟು ಪ್ರತಿಗಳು ಬೇಕೆಂಬುದನ್ನು ಅಕ್ಟೋಬರ್ ೩೦ ರೊಳಗೆ ತಿಳಿಸಬೇಕು. ಪ್ರತಿಒಂದಕ್ಕೆ 0—56 ನಯೆಪೈಸೆಯಂತೆ ಮುಂಗಡ ಹಣ ಕಳುಹಿಸಬೇಕು. 50 ಪ್ರತಿಗಳಿಗಿಂತ ಹೆಚ್ಚಿಗೆ ತರಿಸಿಕೊಳ್ಳುವವರಿಗೆ ಶೇಕಡ 33 1/3 ಕಮಿಷನ್ ಕೊಡಲಾಗುವುದು.

‘ಜನಶಕ್ತಿ’ ಬೆಲೆ ಬದಲಾವಣೆ

‘ಜನಶಕ್ತಿ’ ಈವರೆಗೆ ಹತ್ತು ಪುಟಗಳು ಪ್ರಕಟವಾಗುತ್ತಿತ್ತು. ನವೆಂಬರ್ ಮಾಸದಿಂದ, ಅಂದರೆ ಸಂಪುಟ ೭—ಸಂಚಿಕೆ ೧ ರಿಂದ ‘ಜನಶಕ್ತಿ’ ಹನ್ನೆರಡು ಪುಟಗಳಿಗೆ ಹೆಚ್ಚಿಸಲಾಗುವುದು. ಬೆಲೆಯನ್ನು ಈಗಿನ 0—13 ನಯೆ ಪೈಸೆಯಿಂದ 0--15 ನಯಾಪೈಸೆ ಗಳಿಗೆ ಹೆಚ್ಚಿಸಲಾಗುವುದು. ಈ ಬದಲಾವಣೆಯನ್ನು ಗಮನಿಸಬೇಕಾಗಿ ವಿನಂತಿ.

‘ಜನಶಕ್ತಿ’ಯ ಹೊಸ ಚಂದಾ ವಿವರ

12 ಪುಟಗಳು — ಬಿಡಿಪ್ರತಿ 0·15 ನಯೆ ಪೈಸೆ

ವಾರ್ಷಿಕ ಚಂದಾ ರೂ. 7·50 — ಆರು ತಿಂಗಳಿಗೆ ರೂ. 3·75

ಈಗ ಚಂದಾದಾರರಾಗಿರುವವರಿಗೆ ಚಂದಾ ಮುಗಿಯುವವರೆಗೂ ಪತ್ರಿಕೆ ಕಳಿಸಲಾಗುವುದು. ಮುಂದುವರಿಸುವಾಗ ಹೊಸ ದರದಲ್ಲಿ ಚಂದಾ ಹಣ ಪಾವತಿ ಮಾಡಬೇಕು. ಡಿಸೆಂಬರ್ ೧೯೫೮ರ ಅಂತ್ಯದವರೆಗೆ ಚಂದಾದಾರರಾಗುವವರಿಗೆ ವಿಶೇಷ ರಿಯಾಯಿತಿಯನ್ನು ಕೊಡಲಾಗುವುದು. ಅವರು ಹಳೆಯ ದರದಲ್ಲಿ ವಾರ್ಷಿಕ ರೂ. ೬/- ಆರು ತಿಂಗಳಿಗೆ ರೂ. ೩/- ಚಂದಾ ಹಣ ಪಾವತಿ ಮಾಡಿದರೆ ಸಾಕು.

ಹೆಚ್ಚಿನ ವಿವರಗಳಿಗೆ ಇಂದೇ ಬರೆಯಿರಿ

ಮ್ಯಾನೇಜರ್,

ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

L-59, ಕಾಶೀವಿಶ್ವೇಶ್ವರಗುಡಿ ರಸ್ತೆ - ಸುಲ್ತಾನಪೇಟೆ - ಬೆಂಗಳೂರು-2

ಉಳಿದಿರುವ ದಾರಿ: ರೈತರ ಸಾಮೂಹಿಕ ಹೋರಾಟ

(ಮೊದಲನೇ ಪುಟದಿಂದ)

ದ ಪ್ರತಿಗಾಮಿ ಶಿಫಾರಸುಗಳನ್ನು ಮಾಡಿದೆ.

ಎ. ಐ. ಸಿ. ಸಿ. ಯ ಭೂಸುಧಾರಣಾ ಉಪಸಮಿತಿಯ ಸದಸ್ಯರಾಗಿರುವ ಶ್ರೀ ಘನಶ್ಯಾಮಲಾಲ್ ಓಜರವರು ಕಾಂಗ್ರೆಸ್ ಮತ್ತು ರಾಷ್ಟ್ರವು ಯೋಜನಾಬದ್ಧವಾದ ಬೆಳವಣಿಗೆಗೆ ಕಟ್ಟುಬಿದ್ದಿದೆ, ಆದರಿಂದಾಗಿ ಭೂಸುಧಾರಣೆ ತರುವುದು ಅನಿವಾರ್ಯ. ಕಾಂಗ್ರೆಸ್ ಹೈಕಮಾಂಡು ಭೂಹಿಡುವಳಿಯ ಮೇಲೆ ಪರಿಮಿತಿ ಗೊತ್ತು ಮಾಡುವ ವಿಷಯದಲ್ಲಿ ಖಚಿತವಾದ ನಿಲುವೆಯನ್ನು ತಳೆದಿರುವುದಾಗಿ ತಿಳಿಸಿದರೆಂದು ಗೊತ್ತಾಗಿದೆ.

ಆದರೆ ಸಭೆಯಲ್ಲಿ ಚರ್ಚೆಯಾದ ನಂತರ ಪರಿಸ್ಥಿತಿಯೇ ಬೇರೆಯಾಗಿದೆ. ಭೂಹಿಡುವಳಿಯ ಪರಿಮಿತಿ ಗೊತ್ತುಪಡಿಸುವ ವಿಷಯ ಕೈಬಿಡಲಾಗಿದೆಯೆಂದೇ ಹೇಳಬಹುದು. ಹಳೆಯ ಮೈಸೂರಿನ ಕಾಂಗ್ರೆಸ್ ನಾಯಕರುಗಳು ಅಂದಿನಿಂದಲೂ ಭೂಸುಧಾರಣೆಗಳಿಗೆ ವಿರೋಧವಿದ್ದಾರೆ, ಈಗಲೂ ವಿರೋಧವಿದ್ದಾರೆ. ಸ್ವತಃ ಅಧ್ಯಕ್ಷ ವೀರಣ್ಣ ಗೌಡರೇ ದೊಡ್ಡ ಭೂಮಾಲಿಕರರಾಗಿದ್ದಾರೆ. ಈಗ ಸಚಿವರಾಗಿರುವ ಚನ್ನಬಸಪ್ಪನವರೂ, ಮಾಜಿ ಮುಖ್ಯ ಮಂತ್ರಿ ಕೆಂಗಲ್ ಹನುಮಂತಯ್ಯನವರೂ ಭೂಸುಧಾರಣೆಯ ಕಡುವಿರೋಧಿಗಳಾಗಿದ್ದಾರೆ. ಇನ್ನು ದ. ಕನ್ನಡ ಜಿಲ್ಲೆಯ ಸದಸ್ಯರುಗಳೂ ಇವರುಗಳೆಲ್ಲರೂ ಸಾಮಾನ್ಯವಾಗಿ ಭೂಮಾಲಿಕರಾಗಿರುವುದರಿಂದ, ಹಿಡುವಳಿಯ ಪರಿಮಿತಿಯು ಬಾಧಿಸುವುದರಿಂದ ವಿರೋಧವಿದ್ದಾರೆ. ದ. ಕ. ಜಿಲ್ಲೆಯ ಶಾಸನ ಸಭಾ ಸದಸ್ಯರೆಲ್ಲರೂ ಸಹ ಜತ್ತಿ ಸಮಿತಿಯ ವರದಿಯನ್ನು ವಿರೋಧಿಸಿದ್ದಾರೆ. ಗುಲ್ಬರ್ಗ, ಬೀದರ, ರಾಯಚೂರು ಜಿಲ್ಲೆಯ ಕಾಂಗ್ರೆಸ್ ಸದಸ್ಯರು, ಉತ್ತರ ಕರ್ನಾಟಕದವರು ಸಾಮಾನ್ಯವಾಗಿ ಭೂಸುಧಾರಣಾ ಕಾಯಿದೆಯ ಪರವಾಗಿದ್ದಾರೆ.

ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಾಗಲೀ ಶಾಸನ ಸಭೆಯಲ್ಲಾಗಲೀ ಭೂಸುಧಾರಣೆಯ ಪರವಾಗಿರುವ ಮತ್ತು ವಿರೋಧವಾಗಿರುವವರ ಲೆಖ್ಖ ಹಾಕಿದಲ್ಲಿ ಪ್ರಗತಿಪರವಾದ ಭೂಸುಧಾರಣೆಯನ್ನು ವಿರೋಧಿಸುವವರೇ ಅಧಿಕವಾಗಿದ್ದಾರೆಂದು ಹೇಳಬಹುದು. ಹೀಗಿರುವಾಗ ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಪ್ರಗತಿಪರವಾದ ಭೂಸುಧಾರಣಾ ಕಾಯಿದೆಯನ್ನು ತರುವುದು ಕನಸಿನ ಮಾತಾಗಿದೆ ಎಂದು ಹೇಳಬೇಕು.

ಚಳವಳಿಯೇ ದಾರಿ

ತಮ್ಮ ಸರಕಾರದಿಂದಲೇ ನೇಮಿತವಾಗಿದ್ದ ಜತ್ತಿಸಮಿತಿಯ ವರದಿಯನ್ನು ಇಂದು ಮುಂದೆಗೊತ್ತಲಾಗುತ್ತಿದೆ. ಜತ್ತಿಯವರೇ ಮುಖ್ಯ ಮಂತ್ರಿಯಾಗಿರುವಾಗ ತಮ್ಮ ವರದಿಯಲ್ಲಿ ಶಿಫಾರಸುಗಳನ್ನೇ ಕಾಯಿದೆಯಲ್ಲಿ ಅಳವಡಿಸಲು ಸಾಧ್ಯವಿಲ್ಲದಿರುವಾಗ, ಅವರು ಅಧಿಕಾರದಲ್ಲಿದ್ದಾದರೂ ಸಾಧಿಸುವುದೇನು ? ಜತ್ತಿ ಸಮಿತಿಯ ಶಿಫಾರಸುಗಳು ಪ್ರಗತಿಪರವಾದುದೆಂದು ನಾವು ಹೇಳುವುದಿಲ್ಲ. ಆದರೆ ಇಂದು ಅದರಲ್ಲಿನ ಕೆಲವು ಸುಧಾರಣೆಗಳಿಗೂ ಕಾಂಗ್ರೆಸ್ಸಿಗರ ವಿರೋಧವಿರುವುದನ್ನು ನೋಡಿದರೆ, ವರದಿಯ ಶಿಫಾರಸುಗಳೂ ಸಹ ನೀರಿನಲ್ಲಿ ಹೋಮ ಮಾಡಿದಂತಾಗಿವೆ.

ಕಾಂಗ್ರೆಸ್ಸಿನ ಈ ಪ್ರತಿಗಾಮಿ ನೀತಿಯನ್ನು ವಿರೋಧಿಸಿ, ಪ್ರಗತಿಪರವಾದ ಭೂಸುಧಾರಣಾ ಕಾಯಿದೆಗಾಗಿ ಪ್ರಬಲವಾದ ರೈತ ಚಳವಳಿ ಅಗತ್ಯ. ಭೂಸುಧಾರಣೆ ತರುವ ಹೆಸರಿನಲ್ಲಿ ಕಣ್ಣುಮುಚ್ಚಾಲೆ ಆಟ ಆಡಿ ಜನತೆಯನ್ನು ಮೋಸಗೊಳಿಸುವ ಈ ಕುತಂತ್ರವನ್ನು ಬಯಲಿಗೆಳೆಯಬೇಕಾಗಿದೆ.

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone 3810